₹ 4 | ಪುಟ: 4 | ಸಂಪುಟ: 4 | ಸಂಚಿಕೆ 72 | newsbelagavi@gmail.com | 9900332089 | 9900332089



# ಬೆಳಗಾವಿ ವರದಿ

ಕನ್ನಡ ದಿನಪತ್ರಿಕೆ
ಪ್ರಧಾನ ಸಂಪಾದಕರು: ಸತೀಶ್.ಬಿ.ಜಿ
BELAGAVI VARADI KANNADA DAILY
Volume : 4 | Issue: 72 | Tuesday, 02, MAY, 2023 | RNI: KARKAN/2020/79084 | Regn,No:G-2/PMG/KA/NK/BM/139/2021-23 | 24

# ವಿಧಾನಸಭಾ ಚುನಾವಣೆ: ಬಿಜೆಪಿ ಪ್ರಣಾಳಿಕೆ ಬಿಡುಗಡೆ

## 3 ಸಿಲಿಂಡರ್, ಹಾಲು ಉಚಿತ, ಕೃಷಿಕರ ಕಲ್ಯಾಣಕ್ಕೆ ಒತ್ತು

ಬೆಂಗಳೂರು: ರಾಜ್ಯ ವಿಧಾನಸಭಾ ಚುನಾವಣೆಗೆ ಪಕ್ಷದ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿರುವ ಬಿಜೆಪಿಯು, ಅಧಿಕಾರಕ್ಕೆ ಬಂದರೆ ಪಡಿತರದಲ್ಲಿ 5 ಕೆಜಿ ಅಕ್ಕಿ ಜೊತೆ ಇನ್ನೂ 5 ಕೆಜಿ ಸಿರಿಧಾನ್ಯ ವಿತರಣೆ ವಿತರಣೆ ಮಾಡುವುದಾಗಿ ಹಾಗೂ ಬಿಪಿಎಲ್ ಕುಟುಂಬಕ್ಕೆ ಪ್ರತಿ ದಿನ ಅರ್ಧ ಲೀಟರ್ ನಂದಿನಿ ಹಾಲು ನೀಡುವ ಭರವಸೆಯನ್ನು ನೀಡಿದೆ.

ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಣಾಳಿಕೆ ಸಲಹಾ ಸಮಿತಿ ಸಂಚಾಲಕ ಮತ್ತು ಸಚಿವ ಡಾ.ಕೆ.ಸುಧಾಕರ್ ಅವರು, ಪ್ರಣಾಳಿಕೆ ಸಿದ್ಧಪಡಿಸಲು 38 ವಿವಿಧ ವಿಭಾಗ, 178 ಕ್ಷೇತ್ರಗಳಲ್ಲಿ ಸಲಹೆ ಪಡೆಯಲಾಗಿದೆ. ಮಿಸ್ ಕಾಲ್ ಮೂಲಕ 29,306 ಸಲಹೆ ಸೇರಿ ಒಟ್ಟು 6 ಲಕ್ಷ ಸಲಹೆ ಬಂದಿವೆ. ಎಲ್ಲವನ್ನೂ ಪರಿಶೀಲನೆ ನಡೆಸಿದ್ದೇವೆ. 17 ರಾಷ್ಟ್ರೀಯ ನಾಯಕರು ಪ್ರಣಾಳಿಕೆ ಸಿದ್ಧಪಡಿಸಲು ಸಹಕರಿಸಿದ್ದಾರೆ. ತಜ್ಞರ ಕಡೆಯಿಂದ 900 ಸಲಹೆ ಬಂದಿವೆ, 50 ಕ್ಷೇತ್ರ ತಜ್ಞರ ಸಲಹೆ ಬಂದಿದೆ ಎಂದು ಹೇಳಿದರು.

ಆರೋಗ್ಯಯುಕ್ತ ನಾಡು, ಯುವಕರ ಸಬಲೀಕರಣ, ಮಹಿಳೆಯರನ್ನು ಮುಖ್ಯ ವಾಹಿನಿಗೆ ತರಲು ಮತ್ತು ವೃದ್ಧರು, ಅಂಗವಿಕಲರು, ವಿಧವೆಯರಿಗೆ ಅನುಕೂಲಕರ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಸಿಲಿಂಡರ್ ಬೆಲೆ ಬಗ್ಗೆಯೂ ಪ್ರಣಾಳಿಕೆಯಲ್ಲಿದೆ ಎಂದು ತಿಳಿಸಿದರು.

ಬಳಿಕ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಬೇರೆ ಪಕ್ಷದ ರೀತಿ ಸುಳ್ಳು ಭರವಸೆ ಕೊಡದೆ ಈಡೇರಿಸುವ ಭರವಸೆ ಕೊಡುತ್ತಿದ್ದೇವೆ. ಕಾಂಗ್ರೆಸ್ 13 ರಾಜ್ಯದಲ್ಲಿ ಭರವಸೆ ನೀಡಿದ್ದರೂ ಜನರು ತಿರಸ್ಕಾರ ಮಾಡಿದ್ದಾರೆ.

ಜನರಿಗೆ ಅವರ ಮೇಲೆ ವಿಶ್ವಾಸ ಇಲ್ಲ, ಕಾಂಗ್ರೆಸ್ ಆಡಳಿತ ರಾಜ್ಯಗಳಲ್ಲಿ ಭರವಸೆ ಈಡೇರಿಸಲಾಗಿಲ್ಲ, ಹಾಗಾಗಿ ಅವರನ್ನು ಜನ ನಂಬಲ್ಲ ಎಂದು ಹೇಳಿದರು.

ಸಿಎಂ ಬೊಮ್ಮಾಯಿ ಮಾತನಾಡಿ, ಇಡೀ ರಾಷ್ಟ್ರದ ಆಡಳಿತ ಚುಕ್ಕಾಣಿ ಹಿಡಿದಿರುವ ಮತ್ತು ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಪಕ್ಷ, ದೇಶದ ಆಡಳಿತದಲ್ಲಿ ದಿಕ್ಸೂಚಿ ಪಾತ್ರ ವಹಿಸುತ್ತಿದೆ.

ದೇಶವನ್ನು, ರಾಜ್ಯವನ್ನು ಗಮನದಲ್ಲಿರಿಸಿಕೊಂಡು ಪ್ರಣಾಳಿಕೆ ಮಾಡಬೇಕು, ಆಡಳಿತ ನಡೆಸಬೇಕಿದೆ. ಅತ್ಯಂತ ಪ್ರಬಲ ರಾಜ್ಯಗಳ ಒಕ್ಕೂಟವೇ ದೇಶದ ಬಲ. ಕರ್ನಾಟಕದ ಅಭ್ಯುದಯಕ್ಕೆ ಪೂರಕವಾಗಿ ಪ್ರಣಾಳಿಕೆ ಸಿದ್ಧಪಡಿಸಲಾಗಿದೆ ಎಂದು ಹೇಳಿದರು.




ಬೆಂಗಳೂರಿನ ಶಾಂಗ್ರಿ ಲಾ ಹೋಟೆಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ಅವರು, ಬಿಜೆಪಿ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದರು.

### ಬಿಜೆಪಿ ಪ್ರಣಾಳಿಕೆಯಲ್ಲಿ ಏನೇನಿದೆ...?

ಬಿಪಿಎಲ್ ಕುಟುಂಬಗಳಿಗೆ ಪ್ರತಿ ವರ್ಷ ಯುಗಾದಿ, ಗಣೇಶ ಚತುರ್ಥಿ ಮತ್ತು ದೀಪಾವಳಿಗೆ ತಲಾ ಒಂದರಂತೆ 3 ಅಡುಗೆ ಅನಿಲದ ಸಿಲಿಂಡರ್ ಗಳನ್ನು ಉಚಿತವಾಗಿ ವಿತರಿಸುತ್ತೇವೆ.

ಕೈಗೆಟುಕುವ ದರದಲ್ಲಿ ಗುಣಮಟ್ಟದ ಮತ್ತು ಅರೋಗ್ಯಕರ ಆಹಾರವನ್ನು ಒದಗಿಸಲು ರಾಜ್ಯದ ಪ್ರತಿ ಮಹಾನಗರ ಪಾಲಿಕೆಯ ವಾರ್ಡ್ ಗಳಲ್ಲಿ 'ಅಟಲ್ ಆಹಾರ ಕೇಂದ್ರ' ವನ್ನು ಸ್ಥಾಪಿಸುತ್ತೇವೆ.

'ಪೋಷಣೆ' ಯೋಜನೆಯ ಮೂಲಕ ಪ್ರತಿ ಬಿಪಿಎಲ್ ಕುಟುಂಬಗಳಿಗೆ ಪ್ರತಿದಿನ ಅರ್ಧ ಲೀಟರ್ ನಂದಿನಿ ಹಾಲು ಮತ್ತು ಪ್ರತಿ ತಿಂಗಳು 5 ಕಳೆ ಶ್ರೀ ಅನ್ನ ಸಿರಿಧಾನ್ಯವನ್ನು ಒಳಗೊಂಡ ಪಡಿತರ ಕಿಟ್ ನೀಡುತ್ತೇವೆ.

ಉನ್ನತ ಮಟ್ಟದ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಕರ್ನಾಟಕದಲ್ಲಿ ಏಕರೂಪ ನಾಗರಿಕ ಸಂಹಿತೆ [ಯುಸಿಸಿ) ಜಾರಿಗೊಳಿಸುತ್ತೇವೆ.

ರಾಜ್ಯದಾದ್ಯಂತ ನಿವೇಶನ ರಹಿತ/ ವಸತಿ ರಹಿತ ನಿವಾಸಿಗಳಿಗೆ ಸರ್ವರಿಗೂ ಸೂರು ಯೋಜನೆ'ಯಡಿ 10 ಲಕ್ಷ ವಸತಿ ನಿವೇಶನಗಳನ್ನು ಕಂದಾಯ ಇಲಾಖೆ ಮೂಲಕ ಹಂಚಿಕೆ ಮಾಡುತ್ತೇವೆ.

'ಒನಕೆ ಓಬವ್ವ 'ಸಾಮಾಜಿಕ ನ್ಯಾಯ ನಿಧಿ' ಯೋಜನೆಯನ್ನು ಪ್ರಾರಂಭಿಸುತ್ತೇವೆ. ಈ ಯೋಜನೆಯಡಿ ಎಸ್‌ಸಿ, ಎಸ್‌ಟಿ ಸಮುದಾಯದ ಮಹಿಳೆಯರು ಐದು ವರ್ಷಗಳ ಅವಧಿಗೆ ಮಾಡುವ ಸ್ಥಿರ ಠೇವಣಿಗಳ ಮೇಲೆ 10 ಸಾವಿರದವರೆಗೆ ತಾಳಿಯಾಗುವ ಠೇವಣಿ ನೀಡುತ್ತೇವೆ.

ಬೆಂಗಳೂರಿನ ಅಪಾರ್ಟ್‌ಮೆಂಟ್‌ಗಳಲ್ಲಿ 'ಸುಲಲಿತ ಜೀವನ'ಕ್ಕೆ ಕರ್ನಾಟಕ ಅಪಾರ್ಟ್ ಮೆಂಟ್ ಮಾಲೀಕತ್ವ ಕಾಯಿದೆ 1972ಕ್ಕೆ ಸೂಕ್ತ ತಿದ್ದುಪಡಿಗಳನ್ನು ತರುತ್ತೇವೆ ಹಾಗೂ ಕಂದುಕೊರತೆಗಳ ಪರಿಹಾರಕ್ಕೆ ಆನ್ ಲೈನ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುತ್ತೇವೆ.

"ವಿಶ್ವೇಶ್ವರಯ್ಯ ವಿದ್ಯಾ ಯೋಜನೆ' ಇದರಡಿ ಸರ್ಕಾರಿ ಶಾಲೆಗಳನ್ನು ಅತ್ಯುನ್ನತ ಶ್ರೇಣಿಗೆ ಮೇಲ್ದರ್ಜೆಗೇರಿಸುವ ನಿಟ್ಟಿನಲ್ಲಿ ಪ್ರಬುದ್ಧರು ಹಾಗೂ ಸಂಸ್ಥೆಗಳ ಜತೆ ಸಹಭಾಗಿತ್ವ ಹೊಂದಲಾಗುತ್ತದೆ.

'ಸಮನ್ವಯ ಯೋಜನೆ' ಇದರಡಿ ತ್ವರಿತಗತಿಯಲ್ಲಿ ಖಒಇ ಗಳು ಮತ್ತು ಖಖಖ ಗಳ ನಡುವೆ ಸಮನ್ವಯತೆ ಸಾಧಿಸುತ್ತೇವೆ. ಪ್ರತಿಭಾವಂತ ಯುವ ವೃತ್ತಿಪರರಿಗೆ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಕ್ರಿಯಾತ್ಮಕ ಪರಿಸರ ವ್ಯವಸ್ಥೆಯನ್ನು ನಿರ್ಮಾಣ ಮಾಡುತ್ತೇವೆ.

ಐಎಎಸ್/ಕೆಎಎಸ್/ಬ್ಯಾಂಕಿಂಗ್/ ಸರ್ಕಾರಿ ಉದ್ಯೋಗಾಕಾಂಕ್ಷಿಗಳು ತರಬೇತಿ ಪಡೆಯಲು ಆರ್ಥಿಕ ಪ್ರೋತ್ಸಾಹವನ್ನು ನೀಡುವ ಮೂಲಕ ಮಹತ್ವಾಕಾ0ಕ್ಷೆಯ ಯುವಜನರಿಗೆ ವೃತ್ತಿ ಬೆಂಬಲವನ್ನು ಒದಗಿಸುತ್ತೇವೆ.

'ಮಿಷನ್ ಸ್ವಾಸ್ಥ್ಯ ಕರ್ನಾಟಕ'ದ ಅಡಿ ಸರ್ಕಾರಿ ಆಸ್ಪತ್ರೆ /ಆರೋಗ್ಯ ಕೇಂದ್ರಗಳಲ್ಲಿನ ಮೂಲಸೌಕರ್ಯಗಳನ್ನು ಸುಧಾರಿಸುತ್ತೇವೆ. ಮಹಾನಗರ ಪಾಲಿಕೆಯ ಪ್ರತಿ ವಾರ್ಡ್ ನಲ್ಲಿ ಲ್ಯಾಬೊರೇಟರಿ ಸೌಲಭ್ಯ ಹೊಂದಿರುವ ನಮ್ಮ ಕ್ಲಿನಿಕ್ ಸ್ಥಾಪಿಸುತ್ತೇವೆ. ಹಾಗೂ ಹಿರಿಯ ನಾಗರಿಕರಿಗೆ ಪ್ರತಿ ವರ್ಷ ಉಚಿತವಾಗಿ ಸಂಪೂರ್ಣ ಆರೋಗ್ಯ ತಪಾಸಣೆಯ ಸೌಲಭ್ಯ ಕಲ್ಪಿಸುತ್ತೇವೆ.

ನಮ್ಮಮುಂದಿನ ಪೀಳಿಗೆಗಾಗಿ ಬೆಂಗಳೂರನ್ನು ಅಭಿವೃದ್ಧಿಪಡಿಸಿ, ಅದನ್ನು 'ರಾಜ್ಯ ರಾಜಧಾನಿ ಪ್ರದೇಶ' ಎಂದು ಗುರುತಿಸಲಾಗುತ್ತದೆ. ತಂತ್ರಜ್ಞಾನ ಆಧಾರಿತ ನಗರ ಅಭಿವೃದ್ಧಿ ಕಾರ್ಯಕ್ರಮವನ್ನು ಕಾರ್ಯಗತಗೊಳಿಸುತ್ತೇವೆ. ಸುಲಲಿತ ಜೀವನಕ್ಕೆ ಅನುವುಮಾಡಿಕೊಡುವ ಸುಸಂಘಟಿತ ಸಾರಿಗೆ ಜಾಲ ಸೃಷ್ಟಿಸುತ್ತೇವೆ. ಅಲ್ಲದೇ, ಬೆಂಗಳೂರನ್ನು ಡಿಜಿಟಲ್ ಇನ್ನೋವೇಶನ್‌ನ ಜಾಗತಿಕ ಕೇಂದ್ರವಾಗಿ ರೂಪಿಸಲು ಪೂರಕ ಪರಿಸರ ವ್ಯವಸ್ಥೆ ಕಲ್ಪಿಸುತ್ತೇವೆ.

ಕರ್ನಾಟಕವನ್ನು ಎಲೆಕ್ಟ್ರಿಕ್ ವಾಹನಗಳ ಪ್ರಮುಖ ಕೇಂದ್ರವನ್ನಾಗಿ ರೂಪಿಸುತ್ತೇವೆ. ಪೂರಕವಾಗಿ, ಚಾರ್ಜಿಂಗ್ ಸ್ಟೇಷನ್‌ಗಳ ಸ್ಥಾಪನೆ, 1,000 ಸ್ಟಾರ್ಟ್ ಅಪ್‌ಗಳಿಗೆ ಪ್ರೋತ್ಸಾಹ, ಹಾಲಿ ಇರುವ ಬಿಎಂಟಿಸಿ ಬಸ್ ಗಳನ್ನು ಎಲೆಕ್ಟ್ರಿಕ್ ಬಸ್‌ಗಳಾಗಿ ಪರಿವರ್ತಿಸುತ್ತೇವೆ. ಜತೆಗೆ ಬೆಂಗಳೂರಿನ ಹೊರವಲಯದಲ್ಲಿ 'ಇಬಿ ಸಿಟಿ' ಅಭಿವೃದ್ಧಿ

ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಕಿರು ಶೀತಲೀಕರಣ ಸೌಲಭ್ಯಗಳು ಮತ್ತು ಕೃಷಿ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು 2 30,000 ಕೋಟಿ ಮೊತ್ತದ 'ಕೆ-ಅಗಿ ಫಂಡ್' ಸ್ಥಾಪಿಸುತ್ತೇವೆ. ಎಪಿಎಂಸಿಗಳ ಆಧುನೀಕರಣ ಮತ್ತು ಡಿಜಿಟಲೀಕರಣ ಮಾಡುತ್ತೇವೆ. ಕೃಷಿ ಯಾಂತ್ರೀಕರಣಕ್ಕೆ ಒತ್ತು ನೀಡುತ್ತೇವೆ. ಜತೆಗೆ, 5 ಹೊಸ ಕೃಷಿ ಆಧಾರಿತ ಕೈಗಾರಿಕಾ ಕ್ಲಸ್ಟರ್ ಗಳು ಮತ್ತು 3 ಹೊಸ ಆಹಾರ ಸಂಸ್ಕರಣಾ ಪಾರ್ಕ್ ಗಳನ್ನು ಸ್ಥಾಪಿಸುತ್ತೇವೆ.

ಅತ್ಯಾಧುನಿಕ ಮೂಲಸೌಕರ್ಯಗಳನ್ನು ಒದಗಿಸಿ ಕರ್ನಾಟಕವನ್ನು ದೇಶದ ಅತ್ಯಂತ ಮೆಚ್ಚಿನ ಪ್ರವಾಸಿ ತಾಣವನ್ನಾಗಿ ರೂಪಿಸಲು ಕಲ್ಯಾಣ ಸರ್ಕ್ಯೂಟ್ ಬನವಾಸಿ ಸರ್ಕ್ಯೂಟ್, ಪರಶುರಾಮ ಸರ್ಕ್ಯೂಟ್ ಮತ್ತು ಕಾವೇರಿ ಸರ್ಕ್ಯೂಟ್ ಗಾಣಗಾಪುರ ಕಾರಿಡಾರ್ರ್ ಅನ್ನು ಅಭಿವೃದ್ಧಿಪಡಿಸಲು 91,500 ಕೋಟಿ ವಿನಿಯೋಗಿಸುತ್ತೇವೆ.

ಉತ್ಪಾದನಾ ವಲಯದಲ್ಲಿ 10 ಲಕ್ಷ ಉದ್ಯೋಗಗಳನ್ನು ಬೆಂಗಳೂರಿನ ಆಚೆ ಸೃಷ್ಟಿಸುವ ಲಾಜಿಸ್ಟಿಕ್ಸ್ ಕೈಗಾರಿಕಾ ಕ್ಲಸ್ಟರ್‌ಗಳು, ಸಂಪರ್ಕ ಮತ್ತು ರಫ್ತು ಸೌಲಭ್ಯಗಳನ್ನು ಒಳಗೊಂಡ ಸಮಗ್ರ ಯೋಜನೆಯನ್ನು ಸಂಯೋಜಿಸುವ ಮೂಲಕ 'ಉತ್ಪಾದನಾ ಆಧರಿತ ಪ್ರೋತ್ಸಾಹ' ಯೋಜನೆಯ ವ್ಯಾಪ್ತಿಯನ್ನು ವಿಸ್ತರಿಸುತ್ತೇವೆ.

## ಸರ್ಕಾರಿ ನೌಕರರಿಗೆ ಹಳೆ ಪಿಂಚಣಿ ಯೋಜನೆಯು ಪ್ರಣಾಳಿಕೆಯ ಭಾಗವಾಗಲಿದೆ: ಡಿಕೆಶಿ

ಬೆಂಗಳೂರು: ಸರ್ಕಾರಿ ನೌಕರರಿಗೆ ಹಳೆ ಪಿಂಚಣಿ ಯೋಜನೆ (ಒಪಿಎಸ್) ಜಾರಿ ಮಾಡುವ ವಿಚಾರವು ಕಾಂಗ್ರೆಸ್‌ನ ಚುನಾವಣಾ ಪ್ರಣಾಳಿಕೆಯ ಭಾಗವಾಗಿರಲಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಬಿಜೆಪಿ ಮತ್ತು ಜೆಡಿಎಸ್‌ನ ಹಲವು ಮುಖಂಡರನ್ನು ತಮ್ಮ ನಿವಾಸದಲ್ಲಿ ಭಾನುವಾರ ಕಾಂಗ್ರೆಸ್ ಪಕ್ಷಕ್ಕೆ ಬರಮಾಡಿಕೊಂಡ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಎರಡು ದಿನಗಳಲ್ಲಿ ಪ್ರಣಾಳಿಕೆ ಬಿಡುಗಡೆ ಮಾಡಲಾಗುವುದು.

ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ, ಕರಾವಳಿ, ಮಲೆನಾಡು ಮತ್ತು ಬೆಂಗಳೂರಿಗೆ ಪ್ರತ್ಯೇಕ ಪ್ರಣಾಳಿಕೆಗಳನ್ನು ನೀಡಲಾಗುವುದು' ಎಂದರು.



200 ಯುನಿಟ್‌ವರೆಗೆ ಉಚಿತ ವಿದ್ಯುತ್, ಮನೆಯ ಯಜಮಾನಿಗೆ ತಿಂಗಳಿಗೆ ರೂ 2,000, ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಪ್ರತೀ ಸದಸ್ಯರಿಗೆ ತಿಂಗಳಿಗೆ 10 ಕೆ.ಜಿ. ಅಕ್ಕಿ, ಎಲ್ಲ ಮಹಿಳೆಯರಿಗೆ ಉಚಿತ ಬಸ್ ಪಾಸ್ ಮತ್ತು ನಿರುದ್ಯೋಗಿ ಯುವಜನರಿಗೆ ನಿರುದ್ಯೋಗ ಭತ್ಯೆಯ ಘೋಷಣೆಗಳು ಪ್ರಣಾಳಿಕೆಯಲ್ಲಿ ಇರುತ್ತವೆ. ಪಕ್ಷ ಅಧಿಕಾರಕ್ಕೆ ಬಂದರೆ ಈ ಯೋಜನೆಗಳ ಅನುಷ್ಠಾನಕ್ಕೆ ಮೊದಲ ಸಂಪುಟ ಸಭೆಯಲ್ಲೇ ನಿರ್ಣಯ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

'ಉಚಿತ ಕೊಡುಗೆಗಳಿಗೆ ಸಂಪನ್ಮೂಲವನ್ನು ಹೇಗೆ ಸಂಗ್ರಹಿಸಲಾಗುತ್ತದೆ ಎಂದು ಬಿಜೆಪಿ ಪ್ರಶ್ನೆ ಮಾಡುತ್ತಿದೆ.

ಬಿಜೆಪಿ ಸರ್ಕಾರದಲ್ಲಿನ ಭ್ರಷ್ಟಾಚಾರ ನಿಲ್ಲಿಸಿದರೆ ಈ ಯೋಜನೆಗಳಿಗೆ ಅಗತ್ಯವಿರುವಷ್ಟು ಆರ್ಥಿಕ ಸಂಪನ್ಮೂಲ ದೊರಕುತ್ತದೆ' ಎಂದರು.

## ಪ್ರಣಾಳಿಕೆಗೂ ಮೊದಲು ರಿಪೋರ್ಟ್ ಕಾರ್ಡ್ ಬಿಡುಗಡೆ: ಸಿದ್ದರಾಮಯ್ಯ ಪ್ರತಿಕ್ರಿಯೆ



ನವದೆಹಲಿ: ರಾಜ್ಯ ವಿಧಾನಸಭಾ ಚುನಾವಣೆಗೆ ಪಕ್ಷದ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿರುವ ಬಿಜೆಪಿ ಜನಸಾಮಾನ್ಯರಿಗೆ ಭರ್ಜರಿ ಕೊಡುಗೆಗಳನ್ನು ಘೋಷಿಸಿದೆ. ಬಿಪಿಎಲ್ ಕುಟುಂಬಕ್ಕೆ ಪ್ರತಿ ದಿನ ಅರ್ಧ ಲೀಟರ್ ನಂದಿನಿ ಹಾಲು ನೀಡುವ ಭರವಸೆಯನ್ನು ನೀಡಿದೆ. ಈ ಬಗ್ಗೆ ವಿಪಕ್ಷ ನಾಯಕ ಸಿದ್ದರಾಮಯ್ಯ ಪ್ರತಿಕ್ರಿಯೆ ನೀಡಿದ್ದು, ಪ್ರಣಾಳಿಕೆ ಬಿಡುಗಡೆ ಮಾಡುವುದಕ್ಕೂ ಮುನ್ನ ರಿಪೋರ್ಟ್ ಕಾರ್ಡ್ ಬಿಡುಗಡೆ ಮಾಡಲಿ ಎಂದು ಸವಾಲು ಹಾಕಿದ್ದಾರೆ.

ಬಿಪಿಎಲ್ ಕಾರ್ಡ್ ಹೊಂದಿರುವ ಕುಟುಂಬಗಳಿಗೆ ಹಾಲು, 5 ಕೆಜಿ ಅಕ್ಕಿ, 5 ಕೆಜಿ ಸಿರಿಧಾನ್ಯ, ಹಬ್ಬಕ್ಕೆ ಉಚಿತ ಗ್ಯಾಸ್ ಸಿಲಿಂಡರ್ ನೀಡುವ ಯೋಜನೆ ಸರಿಯಿದೆಯಾದರೂ ಆದರೆ ಅದಕ್ಕೆ ಸಂಪನ್ಮೂಲಗಳ ಕ್ರೊಡಿಕರಣ ಹೇಗೆ ಮಾಡುತ್ತೀರ ಅದನ್ನು ಹೇಳಿ, ಬಿಜೆಪಿಯವರು ನಮ್ಮ ಪ್ರಣಾಳಿಕೆಯನ್ನು ಲೆಕ್ಕಾಚಾರವಿಲ್ಲದ ಪ್ರಣಾಳಿಕೆ ಎನ್ನುತ್ತಿದ್ದರು. ಈಗ ಬಿಜೆಪಿಯವರು ತಮ್ಮ ಪ್ರಣಾಳಿಕೆ ಜಾರಿಗೆ ಯಾವ ಲೆಕ್ಕಾಚಾರ ಹೊಂದಿದ್ದಾರೆ ಎಂಬುದನ್ನು ಹೇಳಲಿ ಎಂದು ಸಿದ್ದರಾಮಯ್ಯ ಸವಾಲು ಹಾಕಿದ್ದಾರೆ.

## ಜನರ ದಿಕ್ಕು ತಪ್ಪಿಸಲು ಬಿಜೆಪಿಯ ಬಂಡಲ್ ಪ್ರಣಾಳಿಕೆ ಬಿಡುಗಡೆ: ಸತೀಶ ಜಾರಕಿಹೊಳಿ

ಗೋಕಾಕ: ಜನರ ಮತ ಪಡೆಯಲು ಬಿಜೆಪಿ ಬಂಡಲ್ ಪ್ರಣಾಳಿಕೆ ಬಿಡುಗಡೆ ಮಾಡಿದೆ. ಇದನ್ನ ಜಾರಿ ಮಾಡಲು ಅವರಿಗೆ ಇಚ್ಛಾಶಕ್ತಿಯೂ ಇಲ್ಲ, ಜಾರಿ ಮಾಡಲು ಅವರಿಗೆ ಆಗೋದು ಇಲ್ಲ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಹೇಳಿದರು.

ನಗರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸದ್ಯ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದರೂ, ಬಿಜೆಪಿ ತನ್ನ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದೆ. ಈ ಪ್ರಣಾಳಿಕೆ ಈಗಲೇ ಜಾರಿ ಮಾಡಿ ಚುನಾವಣೆಗೆ ಹೋಗಬಹುದಾಗಿತ್ತು. ಆದರೆ ಬಿಜೆಪಿಯವರದು ಬರಿ ಭರವಸೆಗಳ ಬಂಡಲ್ ಪಕ್ಷ ಎಂದ ಅವರು, 4 ವರ್ಷದಲ್ಲಿ 10 ಲಕ್ಷ ಮನೆ ಕಟ್ಟಿ ಕೊಡುತ್ತವೆ ಎಂದು ಬಿಜೆಪಿಯವರು ಹೇಳಿದರು. ಇನ್ನೂವರೆಗೆ ಯಾವುದೇ ಮನೆ ಕಟ್ಟಿಲ್ಲ. ಮನೆ ಕಟ್ಟುವುದು ದೂರಿನ ಮಾತು, ನಾವು ಅಧಿಕಾರದಲ್ಲಿದ್ದಾಗ ಕಟ್ಟಿದ ಮನೆಗಳಿಗೆ ಇವರ ಸರ್ಕಾರ ಇನ್ನೂ ಬಿಲ್ ಕೊಟ್ಟಿಲ್ಲ ಎಂದು ಬಿಜೆಪಿ ವಿರುದ್ಧ ವ್ಯಂಗ್ಯವಾಡಿದರು.

ಕಾಂಗ್ರೆಸ್ ಐದು ಪ್ರಣಾಳಿಕೆ ಬಿಡುಗಡೆ: ಕಾಂಗ್ರೆಸ್ ಪಕ್ಷ ಈಗಾಗಲೇ ಐದು ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದೆ. ನಮ್ಮದು ನುಡಿದಂತೆ ನಡೆದ ಪಕ್ಷ. ಈ ಪ್ರಣಾಳಿಕೆ ಜಾರಿ ಮಾಡಲು ಸುಮಾರು 50 ಸಾವಿರ ಕೋಟಿ ರೂ. ವೆಚ್ಚವಾಗಬಹುದು. ಈ ಪ್ರಣಾಳಿಕೆ ಜಾರಿಗೆ ಹಣ ಎಲ್ಲಿಂದ ತರಬೇಕು ಎಂಬುವುದು ನಮ್ಮ ಪಕ್ಷ ಈಗಾಗಲೇ ಸಿದ್ಧತೆ ಮಾಡಿಕೊಂಡಿದೆ. ಬಿಜೆಪಿ ತರಹ ಬಂಡಲ್ ಪ್ರಣಾಳಿಕೆ ನಮ್ಮದಲ್ಲ. ಈಗಾಗಲೇ ನಮ್ಮ ನಾಯಕರು ಕಾಂಗ್ರೆಸ್ ಪ್ರಣಾಳಿಕೆ ಬಿಡುಗಡೆ ಮಾಡಿರುವ ಕುರಿತು ಲಿಖಿತ ರೂಪದಲ್ಲಿ ಭರವಸೆ ನೀಡಿದ್ದಾರೆ. ನಮ್ಮ ಪಕ್ಷದಿಂದ ಜಾರಿ ಮಾಡಿದ ಪ್ರಣಾಳಿಕೆಗಳೆಲ್ಲವು 100ಕ್ಕೆ 100ರಷ್ಟು ರಾಜ್ಯದಲ್ಲಿ ಜಾರಿಗೆ ತರಲಾಗುವುದು ಎಂದು ಹೇಳಿದರು.



ಬಿಜೆಪಿಯ ಮೇಲಿಲ್ಲ ಜನರ ವಿಶ್ವಾಸ: ಬೆಂಗಳೂರಿನಲ್ಲಿ ಹತ್ತು ಲಕ್ಷ್ ಉದ್ಯೋಗ ಸೃಷ್ಟಿ, ಸರ್ಕಾರಿ ಶಾಲೆಗಳಿಗೆ ಉನ್ನತಿಮಟ್ಟ ಶಿಕ್ಷಣ ನೀಡಲಾಗುವುದು ಎಂದು ಹೇಳಿದ್ದ ಬಿಜೆಯವರು ಬೆಂಗಳೂರಿನಲ್ಲಿ ಯಾವುದೇ ಉದ್ಯೋಗ ಸೃಷ್ಟಿಯಾಗಿಲ್ಲ. ಅಲ್ಲದೇ ಸರ್ಕಾರಿ ಶಾಲೆಗಳಿಗೆ ಉನ್ನತಮಟ್ಟ ಶಿಕ್ಷ ಎಂದು ಹೇಳಿ ಸುಮಾರು ಐದು ಸಾವಿರ ಶಾಲೆಗಳನ್ನು ಮುಚ್ಚಿದ್ದಾರೆ. ನೀರಾವರಿಗೆ ಯೋಜನೆ ಬಗ್ಗೆ ಈಗ ಮಾತನಾಡುವ ಬಿಜೆಪಿಗರು ನಾಲ್ಕು ವರ್ಷ ಏನು ಮಾಡಿದರು. ಬಿಜೆಪಿಯವರು ಹಿಂದೆ 600 ಭರವಸೆಗಳನ್ನು ಕೊಟ್ಟಿದ್ದರು. ಅದರಲ್ಲಿ ಪೂರೈಸಿದ್ದು ಬರೀ 50ರಷ್ಟು ಮಾತ್ರ. ಹೀಗಾಗಿ ಬಿಜೆಪಿ ಮೇಲೆ ಜನರಿಗೆ ವಿಶ್ವಾಸವಿಲ್ಲ. ಈ ಭಾರಿ ರಾಜ್ಯದ ಜನ ಕಾಂಗ್ರೆಸ್ನತ್ತ ಮುಖ ಮಾಡಿದ್ದಾರೆ ಎಂದರು.

ಭರವಸೆ ಈಡೇರಿಸದ ಬಿಜೆಪಿ: ವಿದೇಶಿ ಖಾತೆಗಳಲ್ಲಿ ಜಮೆಯಾಐಗಿರುವ ಕಪ್ಪುಹಣವನ್ನು ವಾಪಸ್ ತಂದು ಸಾರ್ವಜನಿಕರ ಖಾತೆಗಳಿಗೆ 15 ಲಕ್ಷ ಹಣ ಜಮೆ ಮಾಡುವುದಾಗಿ ಪ್ರಧಾನಿ ನರೇಂದ್ರ ಮೋದಿ ಭರವಸೆ ನೀಡಿದ್ದರು. ಆದರೆ ಅಧಿಕಾರಕ್ಕೆ ಬಂದ ಮೇಲೆ ಈ ಭರವಸೆಯನ್ನೇ ಅವರು ಮರೆತಿದ್ದಾರೆ. ಅಲ್ಲದೇ 2014ರಲ್ಲಿ ಬಿಜೆಪಿ ಸಾಕಷ್ಟು ಭರವಸೆಗಳನ್ನು ನೀಡಿತ್ತು . ಆದರೆ ಅವು ಜಾರಿಯಾಗದೇ ಕೇವಲ ಹುಸಿ ಭರವಸೆಗಳಾಗಿಯೇ ಉಳಿದಿವೆ. ಇದೇ ರೀತಿ ಈಗಲೂ ಬಿಜೆಪಿ ಹಲವು ಪ್ರಣಾಳಿಕೆ ಬಿಡುಗಡೆ ಮಾಡುತ್ತಿದ್ದು. ಇವೆಲ್ಲವು ಜನರ ದಿಕ್ಕು ತಪ್ಪಿಸಲು ಬಿಜೆಪಿ ಮಾಡುವ ನಾಟಕೀಯ ಪೊಳ್ಳು ಭರವಸೆಗಳಾಗಿವೆ ಎಂದು ಬಿಜೆಪಿ ವಿರುದ್ಧ ಚಾಟಿ ಬೀಸಿದರು.

## ಇಂದು ಕಾಂಗ್ರೆಸ್ ಪ್ರಣಾಳಿಕೆ ಬಿಡುಗಡೆ: ಭರವಸೆಗಳ ಮಹಾಪೂರ ಸಾಧ್ಯತೆ



ಬೆಂಗಳೂರು: ರಾಜ್ಯ ವಿಧಾನಸಭಾ ಚುನಾವಣೆಗೆ ಮೇ 10ರಂದು ಮತದಾನ ನಡೆಯಲಿದ್ದು ಕೆಲವೇ ದಿನಗಳು ಮಾತ್ರ ಬಾಕಿ ಇವೆ. ಹೀಗಾಗಿ ಇಂದು ಬಿಜೆಪಿ ಪಕ್ಷ ಪ್ರಜಾ ಪ್ರಣಾಳಿಕೆ ಹೆಸರಿನಲ್ಲಿ ಚುನಾವಣಾ ಪ್ರಣಾಳಿಕೆ ಬಿಡುಗಡೆ ಮಾಡಿದ ಇದೇ ಬೆನ್ನಲ್ಲೆ ಈಗ ಕಾಂಗ್ರೆಸ್ ಕೂಡ ನಾಳೆ ಪ್ರಣಾಳಿಕೆ ಬಿಡುಗಡೆಗೆ ಮುಂದಾಗಿದೆ.

ಸದ್ಯ ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆ ಬಿಡುಗಡೆ ಮಾಡಲು ಕಾಂಗ್ರೆಸ್ ಸಿದ್ದತೆ ಮಾಡಿಕೊಂಡಿದೆ. ಮೇ 2 ರಂದು ಕಾಂಗ್ರೆಸ್ ಪ್ರಣಾಳಿಕೆ ಬಿಡುಗಡೆ ಮಾಡುವ ಸಾಧ್ಯತೆ ಇದೆ.

ಈಗಾಗಲೇ ಕಾಂಗ್ರೆಸ್ 6 ಗ್ಯಾರಂಟಿಗಳನ್ನು ಘೋಷಣೆ ಮಾಡಿದೆ. ಗೃಹಲಕ್ಷ್ಮಿ, ಗೃಹಜ್ಯೋತಿ, ಯುವ ನಿಧಿ, 10 ಕೆಜಿ ಉಚಿತ ಅಕ್ಕಿ, ಮಹಿಳೆಯರಿಗೆ ಉಚಿತ ಬಸ್ ಪಾಸ್, ಅಂಗನವಾಡಿ, ಆಶಾ, ಬಿಸಿಯೂಟ ನೌಕರರಿಗೆ ಗೌರವ ಧನ ಹೆಚ್ಚಳ ಸೇರಿದಂತೆ 6 ಗ್ಯಾರಂಟಿಗಳನ್ನು ಘೋಷಿಸಿದೆ.

ಇನ್ನು ವಿಭಾಗವಾರು ಪ್ರಣಾಳಿಕೆ ಬಿಡುಗಡೆ ಮಾಡುವ ಸಾಧ್ಯತೆ ಇದೆ. ಕರಾವಳಿ ಭಾಗ, ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ, ಹಳೇ ಮೈಸೂರು ಭಾಗ, ಮಹಿಳೆಯರು, ಯುವಕರು, ರೈತರು, ಕೂಲಿ ಕಾರ್ಮಿಕರು, ಆದಿವಾಸಿಗಳು, ದಲಿತರು, ಒಬಿಸಿ, ಅಲ್ಪಸಂಖ್ಯಾತರು, ಅಪಾರ್ಟ್ಮೆಂಟ್ ನಿವಾಸಿಗಳನ್ನು ಗುರಿಯಾಗಿಸಿಕೊಂಡು ಪ್ರಣಾಳಿಕೆ ಸಿದ್ಧಪಡಿಸಲಿದ್ದಾರೆ. ಕಳೆದ ಬಾರಿಗಿಂತ ಹೆಚ್ಚಿನ ಭರವಸೆಗಳನ್ನು ಘೋಷಣೆ ಮಾಡುವ ಸಾಧ್ಯತೆಯಿದೆ. 2018 ರಲ್ಲಿ 160 ಭರವಸೆಗಳನ್ನು ಕಾಂಗ್ರೆಸ್ ಘೋಷಣೆ ಮಾಡಿತ್ತು.

## ಹಣ ಹಂಚಿಕೆ ಆರೋಪ: ಬಿಜೆಪಿ ಶಾಸಕ ಪಿ. ರಾಜೀವ್ ವಿರುದ್ಧ ಕೇಸ್ ದಾಖಲು



ಬೆಳಗಾವಿ: ಬೆಳಗಾವಿ ಜಿಲ್ಲೆಯ ಕುಡಚಿ ಬಿಜೆಪಿ ಶಾಸಕ ಪಿ. ರಾಜೀವ್ ಅವರ ವಿರುದ್ಧ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣ ದಾಖಲಿಸಲಾಗಿದೆ.

ಕುಡಚಿ ಮತ ಕ್ಷೇತ್ರದಲ್ಲಿ ಏ. 29ರಂದು ನಡೆದ ಬಿಜೆಪಿ ಸಮಾವೇಶಕ್ಕೆ ಹೆಚ್ಚಿನ ಜನರನ್ನು ಸೇರಿಸಲು ಹಣ ಹಂಚಿಕೆ ಮಾಡಿ ಆಮಿಷ ತೋರಿಸಿದ ಆರೋಪದ ಹಿನ್ನೆಲೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿರುವ ಶಾಸಕ ಪಿ. ರಾಜೀವ್ ಸೇರಿದಂತೆ ಇಬ್ಬರ ವಿರುದ್ಧ ಮಾದರಿ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣ ದಾಖಲಿಸಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಭಾಗವಹಿಸಿದ್ದ ಬಿಜೆಪಿ ಸಮಾವೇಶಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಸೇರಿಸುವ ಉದ್ದೇಶದಿಂದ ಮುಗಳಖೋಡ ಪಟ್ಟಣದ ಸಮೀಪ ಹಣ ಹಂಚಿಕೆ ಮಾಡಿ ಆಮಿಷ ಒಡ್ಡಲಾಗಿದೆ ಎಂದು ವರದಿಯಾಗಿತ್ತು. ಹಾಗೂ ಜಾಲತಾಣಗಳಲ್ಲಿ ವರದಿಯ ಪ್ರತಿಕ್ರಿಯೆ ಆಧರಿಸಿ ದೂರು ದಾಖಲಿಸಿರುವುದಾಗಿ ತಿಳಿದಿದೆ.

## ಬೆಳಗಾವಿ ದಕ್ಷಿಣ ಮತಕ್ಷೇತ್ರದಲ್ಲಿ ಕಿಚ್ಚ ಸುದೀಪ್ ರೋಡ್ ಶೋ, ಅಭಯ ಪಾಟೀಲ್ ಪರ ಪ್ರಚಾರ



ಬೆಳಗಾವಿ: ದಕ್ಷಿಣ ಮತಕ್ಷೇತ್ರದಲ್ಲಿ ಕಿಚ್ಚ ಸುದೀಪ್ ರೋಡ್ ಶೋ. ಬಿಜೆಪಿ ದಕ್ಷಿಣ ಮತಕ್ಷೇತ್ರದ ಅಧಿಕೃತ ಅಭ್ಯರ್ಥಿ ಅಭಯ ಪಾಟೀಲ್ ಪರ ಪ್ರಚಾರ ಮಾಡಿದರು.

ಕುಂದಾನಗರಿ ಬೆಳಗಾವಿಗೆ ಆಗಮಿಸಿದ ನಟ ಕಿಚ್ಚ ಸುದೀಪ್ ಬೇಳಗಾವಿ ದಕ್ಷಿಣ ಕ್ಷೇತ್ರದಲ್ಲಿ ರೋಡ್ ಶೋ ಮೂಲಕ ಭರ್ಜರಿ ಪ್ರಚಾರ ಮಾಡಿದರು. ಖಾಜಭಾಗ ಬಸವೇಶ್ವರ ಸರ್ಕಲ್ ನಿಂದ ಪ್ರಾರಂಬವಾದ ಮೆರವಣಿಗೆ ವಡಗಾಂವ ನ ವರೆಗೆ ನಡೆಯಿತು. ಇನ್ನು ನೆಚ್ಚಿನ ನಟನನ್ನು ನೋಡಲು ಜನಸಾಗರವೆ ಸೇರಿತ್ತು.

ಅಭಿಮಾನಿಗಳನ್ನು ಚದುರಿಸಲು ಪೋಲಿಸರು ಹರಸಾಹಸ ಪಟ್ಟರು.ಬಿಜೆಪಿ ಅಭ್ಯರ್ಥಿ ಅಭಯ ಪಾಟೀಲ್ ಪರವಾಗಿ ಅಭಿಮಾನಿಗಳಿ ಮತ ಹಾಕುವಂತೆ ಮನವಿ ಮಾಡಿಕೊಂಡರು.

ತೆರದ ವಾಹನದಲ್ಲಿ ನಡೆದ ಪ್ರಚಾರದ ವೇಳೆ ಅಭಯ ಪಾಟೀಲ್ ಹಾಗೂ ಕಿಚ್ಚ ಸುದೀಪ್ ಸೇರಿದಂತೆ ಬಿಜೆಪಿಯ ಮಾಜಿ ಶಾಸಕ ಅನೀಲ್ ಬೆನಕೆ ಸೇರಿದಂತೆ ಹಲವಾರು ಬಿಜೆಪಿ ಮುಖಂಡರು ಪ್ರಚಾರಕ್ಕೆ ಸಾಥ್ ನೀಡಿದರು.

ನೆಚ್ಚಿನ ನಟನನ್ನು ನೋಡಲು ಸಾವಿರಾರು ಅಭಿಮಾನಿಗಳು ಸೇರಿದರು.

## ಚುನಾವಣಾ ಅಖಾಡದಲ್ಲಿ ಸಿನಿ ಪಾಲಿಟಿಕ್ಸ್: ಕಮಲದ ಪರ ಕಿಚ್ಚ-ಕೈ ಪರ ಶಿವಣ್ಣ



ಬೆಂಗಳೂರು: ಮತದಾನಕ್ಕೆ ಇನ್ನು ಕೆಲವೇ ಕೆಲವು ದಿನಗಳು ಬಾಕಿ ಇದೆ.

ಅಧಿಕಾರದ ಚುಕ್ಕಾಣಿ ಹಿಡಿಯುವ ಹಂಬಲದಲ್ಲಿರೋ ಕೈ ಪಡೆಗೆ ಸ್ಟಾರ್ ಪ್ರಚಾರಕರ ಬಲ ಸಿಗುತ್ತಿದೆ. ಬಿಜೆಪಿಯ ಸುದೀಪ್ ಅಸ್ತ್ರಕ್ಕೆ ಕಾಂಗ್ರೆಸ್ ಶಿವರಾಜಕುಮಾರ್‌ನ್ನು ಕಣಕ್ಕಿಳಿಸಿದೆ.

ರಾಜ್ಯ ಚುನಾಚಣಾ ಅಖಾಡದಲ್ಲಿ ಸಿನಿ ಪಾಲಿಟಿಕ್ಸ್ ರಂಗೇರುತ್ತಿದೆ. ಎಲೆಕ್ಷನ್ ಹತ್ತಿರವಾಗ್ತಿದ್ದಂತೆ ರಾಜಕೀಯ ಪಕ್ಷಗಳು ಸ್ಯಾಂಡಲ್ವುಡ್ ಸ್ಟಾರ್ಸ್ ಅನ್ನು ಪ್ರಚಾರದ ಅಖಾಡಕ್ಕೆ ಇಳಿಸುತ್ತಿದ್ದಾರೆ.

ಈಗಾಗಲೇ ಕಿಚ್ಚ ಸುದೀಪ್ ಚುನಾವಣಾ ಅಖಾಡಲ್ಲಿ ಘರ್ಜಿಸುತ್ತಿದ್ದಾರೆ. ಇಂಟರೆಸ್ಟಿಂಗ್ ಅಂದ್ರೆ ಬಿಜೆಪಿ ಸ್ಟಾರ್ ಪ್ರಚಾರಕ್ಕೆ ಕಾಂಗ್ರೆಸ್ ಪಾಳಯ ಠಕ್ಕರ್ ಕೊಟ್ಟಿದೆ.

ಹಸ್ತದ ಪರ ಚುನಾವಣಾ ಅಖಾಡಕ್ಕೆ ಹ್ಯಾಟ್ರಿಕ್ ಹಿರೋ ಶಿವರಾಜ್‌ಕುಮಾರ್ ಗ್ರ್ಯಾಂಡ್ ಎಂಟ್ರಿಕೊಟ್ಟಿದ್ದಾರೆ.

**Self Declaration**

Format C-1
Declaration about Criminal Cases
Name of address of Candidate: **Basappa Kumbar**
Name of the Political Party : Karnataka Rashtra Samithi
Karnataka State Legislative Assembly – 2023
Name of Constituency: **Ramdurga**

I, **Basappa Kumbar**, a candidate for the above mentioned election, declare for public information the following details about my criminal antecedents.

(A) Pending criminal cases

| Sl No | Name of Court | Case No. and date | Status of cases(s) | Section of Acts concerned and brief description of offense(s) |
|---|---|---|---|---|
| 1 | JMFC, Savadatti | 34/2020 | Pending | 353, Obstruction to Govt. official |

**From.**
**Basappa kumbar**
**Karnataka state Legislative Assembly**
**Ramduag**

# ರಾಜಕಾರಣದಲ್ಲಿ ಒಳ, ಹೊರ ಒಡೆತಗಳಿವೆ: ಶೆಟ್ಟರ್



ಹುಬ್ಬಳ್ಳಿ: 'ರಾಜಕಾರಣದಲ್ಲಿ ಒಳ ಮತ್ತು ಹೊರ ಒಡೆತಗಳಿವೆ. ಮುಂದಿನ ಲೋಕಸಭಾ ಚುನಾವಣಾ ಮೇಲೆ ಅದರ ಪರಿಣಾಮ ಗೊತ್ತಾಗಲಿದೆ, ಕಾದು ನೋಡಿ' ಎಂದು ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಜಗದೀಶ ಶೆಟ್ಟರ್ ಹೇಳಿದರು.

ನಗರದ ತಮ್ಮ ನಿವಾಸದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕ್ಷೇತ್ರದಲ್ಲಿ ನನ್ನ ವರ್ಚಸ್ಸು ತಗ್ಗಿಲ್ಲ. ಏನೂ ತಪ್ಪು ಮಾಡದ ನನಗೇಕೆ ಟಿಕೆಟ್ ಕೈತಪ್ಪಿಸಿದರು ಎಂಬ ಪ್ರಶ್ನೆ ಜನರಲ್ಲಿ ಮೂಡಿದ್ದು, ನನ್ನ ಬಗ್ಗೆ ಅನುಕಂಪ ಹೆಚ್ಚಾಗಿದೆ' ಎಂದರು.

ನನ್ನ ಮೇಲೆ ಜನರಿಗಿರುವ ಅನುಕಂಪವೇ ಶಾಸಕನಾಗಿ ನನ್ನನ್ನು ಆರಿಸಿ ತರಬೇಕೆಂಬ ಛಲಕ್ಕೆ ಕಾರಣವಾಗಿದೆ. ಹಿಂದಿನ ಚುನಾವಣೆಗಿಂತ ಈ ಬಾರಿ ಅತಿ ಹೆಚ್ಚು ಮತಗಳ ಅಂತರದಿಂದ ಗೆಲ್ಲುವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಒತ್ತಡ ನಡೆಯದು: 'ನನ್ನನ್ನು ಸೋಲಿಸುವಂತೆ ಬಿಜೆಪಿಯವರು ಕಾರ್ಯಕರ್ತರ ಮೇಲೆ ಒತ್ತಡ ತರುತ್ತಿದ್ದಾರೆ. ಅವರ ತಾಳ್ಮೆಯ ಕಟ್ಟೆ ಒಡೆಯುತ್ತಿದೆ. ಈ ಒತ್ತಡ ಹೆಚ್ಚು ದಿನ ನಡೆಯುವುದಿಲ್ಲ. ಪಕ್ಷಕ್ಕೆ ಈಗಾಗಲೇ ರಾಜೀನಾಮೆ ನೀಡಿರುವವರನ್ನು ಉಚ್ಚಾಟನೆ ಮಾಡಿರುವುದು ಹಾಸ್ಯಾಸ್ಪದ' ಎಂದು ವ್ಯಂಗ್ಯವಾಡಿದರು.

ಕಾದು ನೋಡಿ

'ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಯಾವತ್ತೂ ಕ್ಷೇತ್ರದಲ್ಲಿ ಇಷ್ಟರ ಮಟ್ಟಿಗೆ ಪ್ರಚಾರ ಮಾಡಿರಲಿಲ್ಲ. ಅವರ ಮೇಲೆ ಕೇಂದ್ರದ ಒತ್ತಡವಿದೆ. ಆ ಒತ್ತಡವನ್ನು ಜೋಶಿ ಅವರು ಬೇರೆಯವರ ಮೇಲೆ ಹಾಕಲು ಮುಂದಾಗುತ್ತಿದ್ದಾರೆ. ಸೋಲುವ ಭಯದಲ್ಲಿ ಕಾರ್ಯಕರ್ತರನ್ನು ಹೆದರಿಸಿ, ದಬ್ಬಾಳಿಕೆ ಮಾಡಲಾಗುತ್ತಿದೆ. ಮುಂದೆ 2024 ಲೋಕಸಭಾ ಚುನಾವಣೆ ಬರುತ್ತದೆ, ಆಗ ಏನಾಗಲಿದೆ ಎಂದು ಕಾದು ನೋಡಿ' ಎಂದು ಶೆಟ್ಟರ್ ಮಾರ್ಮಿಕವಾಗಿ ನುಡಿದರು.

'ನನ್ನ ಜೀವನದಲ್ಲಿಯೇ ಈ ತರಹ ಪರಿಸ್ಥಿತಿ ನೋಡಿಲ್ಲ. ಈ ಚುನಾವಣೆ ಶೆಟ್ಟರ್ ವರ್ಸಸ್ ಬಿಜೆಪಿ ಹೈಕಮಾಂಡ್ ಅಲ್ಲ. ಕಾಂಗ್ರೆಸ್ ವರ್ಸಸ್ ಬಿಜೆಪಿ ಅಷ್ಟೇ' ಎಂದರು.

# ಬಿಜೆಪಿ ಶ್ರೀಮಂತ ಉದ್ಯಮಿಗಳ ಪಕ್ಷ: ಖರ್ಗೆ



ಬೆಂಗಳೂರು: ಬಂಡಾವಳಶಾಹಿ ಶ್ರೀಮಂತರ ಆದಾಯ ದೇಶದಲ್ಲಿರುವ 3000 ಸಾವಿರ ಮುನ್ನಲೆಯಲ್ಲಿರುವ ಶ್ರೀಮಂತರ ಆದಾಯ ಶೇ. 70ರಷ್ಟು ಅಭಿವೃದ್ಧಿ ಆಗಿದೆ. ಆದರೆ ಶ್ರಮಿಕರ ವೇತನ ಶೇ 5 ರಷ್ಟು ಮಾತ್ರ ಹೆಚ್ಚಾಗಿದೆ. ಸರ್ಕಾರ ಯಾರ ಪರ ಒಲವು ಹೊಂದಿದೆ ಎಂದು ಈ ಅಂಕಿ–ಅಂಶಗಳು ಹೇಳುತ್ತವೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಇಂದು ಸುದ್ದಿಗೋಷ್ಠಿ ಯಲ್ಲಿ ಅವರು ಬಿಜೆಪಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಕೇಂದ್ರ ಸರ್ಕಾರ ಶ್ರೀಮಂತರ ಹಾಗೂ ಉದ್ಯಮಿಗಳ ಪರವಾಗಿ ಕಾನೂನು ಮಾಡುತ್ತಿದೆ. ಕಾರ್ಮಿಕರ ವಿರೋಧಿ ಕಾನೂನುಗಳನ್ನು ಸರ್ಕಾರ ರಚಿಸಬಾರದು. ಆದ–ನಿಕ ಜೀವನದಲ್ಲಿ ದೈಹಿಕ ಮತ್ತು ಮಾನಸಿಕ ಪರಿಣಾಮ ಶ್ರಮಿಕರ ಆರೋಗ್ಯಕ್ಕೆ ಪರಿಣಾಮ ಆಗುವುದರಿಂದ ಅಂತಹ ಕಾನೂನನ್ನು ತೆಗೆಯಬಾರದು ಎಂದು ಹೇಳಿದರು.

ನಾನು ಕಾರ್ಮಿಕ ಸಚಿವನಾಗಿದ್ದಾಗ ಅನೇಕ ಜನಪರ ಕಾರ್ಯಕ್ರಮಗಳನ್ನು ತಂದಿದ್ದೇವೆ, ಶ್ರಮಿಕರಿಗೆ ಇಎಸ್ ಐ ಆಸ್ಪತ್ರೆ, ಸಾಮಾಜಿಕ ಭದ್ರತೆ, ಸ್ವಾಸ್ಥ್ ಬೀಮಾ ಯೋಜನೆ, ಕಾರ್ಮಿಕರ ಪರ ಅನೇಕ ಉತ್ತಮ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಕೊಟ್ಟಿದೆ. ಅನೇಕ ಕಾರ್ಯಕ್ರಮದ ಬಗ್ಗೆ ಇಡೀ ದೇಶಾದ್ಯಂತ ಜನರಿಗೆ ಉಪಯುಕ್ತವಾಗಲು ಎನ್ ಜಿಓ ಗಳ ಸಹಕಾರದಿಂದ ಜಾಗೃತಿ ಶಿಬಿರಗಳನ್ನು ಆಯೋಜಿಸಿ ಶ್ರಮಿಕರಿಗೆ ನೆರವಾಗಿದ್ದೇವು. ನಾವು ಅಧಿಕಾರದಲ್ಲಿದ್ದಾಗ ಅನೇಕ ಕಾರ್ಮಿಕರ ಸಂಘಟನೆಗಳು ಪ್ರತಿಭಟನೆ, ಏನಾದರೂ ನಮ್ಮಲ್ಲಿ ತಪ್ಪುಗಳು ಕಂಡುಬಂದಾಗ ಪ್ರಶ್ನಿಸುತ್ತಿದ್ದವು ಆದರೆ ಇಂದು ಕಾರ್ಮಿಕ ಸಂಘಟನೆಗಳು ಕೂಡ ಪ್ರಶ್ನೆ ಮಾಡುತ್ತಿಲ್ಲ. ಯಾರು ನಿಮ್ಮ ಬಾಯಿ ಮುಚ್ಚಿಸಿದವರು ಎಂದು ಪ್ರಶ್ನಿಸಿದವರು. ಕಾರ್ಮಿಕ ವರ್ಗ ಅತ್ಯಂತ ಪ್ರಭಾವಿ ಮತ್ತು ಪರಿಣಾಮಕಾರಿಯಾದ ಸಂಘ, ಅನೇಕ ದೇಶಗಳಲ್ಲಿ ರೈತ ಕ್ರಾಂತಿ, ಕಾರ್ಮಿಕ ಕ್ರಾಂತಿಯ ಹಾಗೂ ಮಧ್ಯಮ ವರ್ಗದ ಹೋರಾಟದ ಮೂಲಕವೇ ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬಂದಿದೆ. ಹಾಗಾಗಿ ಕಾರ್ಮಿಕರ ಪರ ಕಾನೂನು ಅವರ ಅಭ್ಯುದ್ಯಯಕ್ಕಾಗಿ ನಾವು ಶ್ರಮಿಸಬೇಕಾಗಿದೆ ಎಂದರು.

ಸಮಾಜ, ದೇಶ ಒಡೆಯುವುದು ಬಿಜೆಪಿ ಉದ್ದೇಶವಾಗಿದೆ. ಸಮಾಜವನ್ನು ಉದ್ದಾರವನ್ನು ಮಾಡುವ ಕೆಲಸ ಬಿಜೆಪಿ ಎಂದಿಗೂ ಮಾಡಲ್ಲ. ಬಿಜೆಪಿ ಪ್ರಣಾಳಿಕೆಯಲ್ಲಿ ಏಕರೂಪ ನಾಗರೀಕ ಸಂಹಿತೆ ಜಾರಿ ಭರವಸೆ ಕೇವಲ ಸಮಾಜ ಒಡೆಯುವ ದೇಶ ಒಡಿಯುವುದು ಅವರ ಉದ್ದೇಶ. ಸಮಾಜದ ಉದ್ದಾರ ಮಾಡುವ ಕೆಲಸ ಬಿಜೆಪಿಗೆ ಗೊತ್ತಿಲ್ಲ ಎಂದು ತರಾಟೆಗೆ ತೆಗೆದುಕೊಂಡರು.

## ಬಿಜೆಪಿಯ ಪ್ರಣಾಳಿಕೆ ಓದುವುದು, ಸತ್ತ ಮಗನ ಜಾತಕ ಓದುವುದು ಎರಡೂ ಒಂದೇ: ಕಾಂಗ್ರೆಸ್ ವ್ಯಂಗ್ಯ



ಬೆಂಗಳೂರು: ಮುಂಬರುವ ವಿಧಾನಸಭೆ ಚುನಾವಣೆಗೆ ಬಿಜೆಪಿ ಘೋಷಣೆ ಮಾಡಿರುವ ಪ್ರಣಾಳಿಕೆ ಬಗ್ಗೆ ಕಾಂಗ್ರೆಸ್ ಕುಹಕವಾಡಿದೆ. ಬಿಜೆಪಿಯ ಪ್ರಣಾಳಿಕೆ ಓದುವುದು, ಸತ್ತ ಮಗನ ಜಾತಕ ಓದುವುದು ಎರಡೂ ಒಂದೇ ಎಂದು ಛೇಡಿಸಿದೆ.

ಈ ಬಗ್ಗೆ ಸರಣಿ ಟ್ವೀಟ್ ಮಾಡಿರುವ ಕಾಂಗ್ರೆಸ್, ಬಿಜೆಪಿ ತನ್ನ ಹಿಂದಿನ ಪ್ರಣಾಳಿಕೆಯನ್ನ ಒಮ್ಮೆ ಜನರ ಮುಂದಿಟ್ಟು ಎಷ್ಟು ಭರವಸೆಗಳನ್ನು ಪೂರೈಸಿದೆ ಎಂಬ ಲೆಕ್ಕ ಕೊಡಲಿ. ನಂತರ ಹೊಸ ಪ್ರಣಾಳಿಕೆಯ ಬಗ್ಗೆ ಮಾತಾಡಲಿ. ಇದು ಬಿಜೆಪಿಗೆ ಸಾಧ್ಯವೇ ಎಂದು ಪ್ರಶ್ನಿಸಿದೆ.

'ಬಿಜೆಪಿಯ ಪ್ರಣಾಳಿಕೆ ಎಂದರೆ ಸುಳ್ಳಿನ ಕಂತೆ ಎಂಬುದು ಈಗಾಗಲೇ ಸಾಬೀತಾಗಿದೆ, ಬಿಜೆಪಿಯ ಪ್ರಣಾಳಿಕೆ ಓದುವುದು, ಸತ್ತ ಮಗನ ಜಾತಕ ಓದುವುದು ಎರಡೂ ಒಂದೇ. ಕಳೆದ ಬಾರಿ ಅನ್ನಪೂರ್ಣ ಕ್ಯಾಂಟೀನ್ ತೆರೆಯುತ್ತೇವೆ ಎಂದಿದ್ದರು. ಆದರೆ

ಇದ್ದ ಇಂದಿರಾ ಕ್ಯಾಂಟೀನ್ ಮುಚ್ಚಿದರು. ಈಗ ಅನ್ನಪೂರ್ಣ ಹೋಗಿ ಅಟಲ್ ಕ್ಯಾಂಟೀನ್ ತೆರೆಯುತ್ತೇವೆ ಎನ್ನುತ್ತಿದ್ದಾರೆ. ಮುಂದಿನ ಪ್ರಣಾಳಿಕೆಯಲ್ಲಿ ಮೋದಿ ಕ್ಯಾಂಟೀನ್ ತೆರೆಯುತ್ತೇವೆ ಎನ್ನುತ್ತಾರೆ. ಇದು ಹೀಗೆಯೇ ಮುಂದುವರೆಯುತ್ತದೆ ಸುಳ್ಳುಗಳ ಸರಮಾಲೆ' ಎಂದು ಕುಹಕವಾಡಿದೆ.

'ಸಾಲ ಮನ್ನಾ ಮಾಡುತ್ತೇವೆ, ಬೆಂಬಲ ಬೆಲೆ ನೀಡುತ್ತೇವೆ, ರೈತರ ಆದಾಯ ಡಬಲ್ ಮಾಡುತ್ತೇವೆ ಎಂದು ಭರಪೂರ ಭರವಸೆ ನೀಡಿ ಮಣ್ಣಿನ ಮಕ್ಕಳ ಕಿವಿ ಮೇಲೆ ಹೂವಿಟ್ಟ ಬಿಜೆಪಿ ಈಗ ಹೊಸ ಸುಳ್ಳುಗಳೊಂದಿಗೆ ಬಂದಿದೆ. ರೈತರ ಮೇಲೆ ಬೆಲೆ ಏರಿಕೆಯ ಹೊರೆ ಹೊ–ರಿಸಿದವರನ್ನು ಒಡ್ಡೋಡಿಸಲು ಜನ ತೀರ್ಮಾನಿಸಿದ್ದಾರೆ' ಎಂದು ಕಾಂಗ್ರೆಸ್ ಹೇಳಿದ್ದಾರೆ.



ಬೆಳಗಾವಿ: ಬೆಳಗಾವಿ ಉತ್ತರ ಮತಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಧಿಕೃತ ಅಭ್ಯರ್ಥಿಯಾದ ರಾಜು ಸೆಟ್ ನಗರದ ಕಾಳಿಯಂಬರಾಯದಲ್ಲಿ ಸಾರ್ವತ್ರಿಕ ವಿಧಾನಸಭೆ ಚುನಾವಣೆ 2023ರ ಚುನಾವಣೆಯ ಭರ್ಜರಿ ಮತಯಾಚನೆ ನಡೆಸಿದರು. ಕಾಳಿ ಅಂಬರಾಯದಲ್ಲಿ ಮತದಾರರು ರಾಜು ಸೇಟ್ಟಿಗೆ ಬೆಂಬಲ ವ್ಯಕ್ತಪಡಿಸಿ ಮತಯಾಚನೆಯಲ್ಲಿ ಭಾಗವಹಿಸಿದ್ದರು. ಈ ಸಮಯದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು.

## ಬಿಜೆಪಿ ಲಿಂಗಾಯತರನ್ನು ಸಿಎಂ ಮಾಡುವುದಿಲ್ಲ: ಕುಮಾರಸ್ವಾಮಿ



ಬಾದಾಮಿ: ಯಾವುದೇ ಕಾರಣ–ಕ್ಕೂ ಬಿಜೆಪಿ ಲಿಂಗಾಯತರನ್ನ ಮುಖ್ಯಮಂತ್ರಿ ಮಾಡುವುದಿಲ್ಲ. ಇದನ್ನು ನಾನು ಮೊದಲೇ ಹೇಳಿದ್ದೆ. ಆ ಕೆಲಸ ಈಗಲೂ ತೆರೆಯ ಹಿಂದೆ ನಡೆಯುತ್ತಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಬಾದಾಮಿಯಲ್ಲಿ ಸೋಮವಾರ ಜೆಡಿಎಸ್ ಅಭ್ಯರ್ಥಿ ಹನುಮಂತ ಮಾವಿನಮರದ ಪರ ಪ್ರಚಾರ ನಡೆಸಿದ ಅವರು, ಬಿಜೆಪಿಯೊಳಗೆ ಬ್ರಾಹ್ಮಣರನ್ನು ಸಿಎಂ ಮಾಡುವ ಕೆಲಸ ಸದ್ದಿಲ್ಲದೆ ನಡೆದಿದೆ ಎಂದು ಆಪಾದಿಸಿದರು.

ರಾಜ್ಯದಲ್ಲಿರುವ ಹಲವಾರು ಸಮಸ್ಯೆಗಳ ಬಗ್ಗೆ ಚರ್ಚಿಸುವುದು ಬಿಟ್ಟು ಸರ್ಪ, ವಿಷಕನ್ಯೆ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ಇಂತಹ ರಾಜಕಾರಣದ ಅವಶ್ಯಕತೆ ಇಲ್ಲ ಎಂದರು.

## ತುರುವೇಕೆರೆ ಸಾರ್ವಜನಿಕ ಸಭೆಯಲ್ಲಿ ರಾಹುಲ್ ಗಾಂಧಿ ಮಾತಿನ ಮುಖ್ಯಾಂಶಗಳು



ಕೆಲವೇ ದಿನಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಚುನಾವಣೆ ಇದ್ದು, ನೀವು ನಿಮ್ಮ ಸರ್ಕಾರವನ್ನು ಆರಿಸಬೇಕಾಗಿದೆ. ಕಳೆದ ಚುನಾವಣೆಯಲ್ಲಿ ನೀವು ಬಿಜೆಪಿ ಸರ್ಕಾರವನ್ನು ಆರಿಸಿರಲಿಲ್ಲ. ಆದರೆ ಬಿಜೆಪಿ ಶಾಸಕರನ್ನು ಹಣದ ಮೂಲಕ ಖರೀದಿ ಮಾಡಿ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿ ಸರ್ಕಾರ ರಚಿಸಿದ್ದಾರೆ. ಕಳೆದ ಮೂರು ವರ್ಷಗಳಿಂದ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಕೇವಲ ಭ್ರಷ್ಟಾಚಾರ ಮಾಡುತ್ತಿದ್ದಾರೆ. ಈ ಸರ್ಕಾರವನ್ನು 40% ಸರ್ಕಾರ ಎಂದು ಕರೆಯುತ್ತಾರೆ.

ಈ ಸರ್ಕಾರದಲ್ಲಿ ಯಾವುದೇ ಕೆಲಸ ಆಗಬೇಕಾದರೂ 40% ಕಮಿಷನ್ ಲೂಟಿ ಮಾಡುತ್ತಾರೆ. ಸರ್ಕಾರದ ಕೆಲಸ ಎಂದರೆ ಜನರಿಗೆ ಅವರ ಹಣವನ್ನು ನೀಡುವುದಾಗಿದೆ. ಸರ್ಕಾರದ ಕೆಲಸ ಶಿಕ್ಷಣ, ಆರೋಗ್ಯ, ರಸ್ತೆ ಅಭಿವೃದ್ಧಿಯಲ್ಲಿ ಹಣ ವಿನಿಯೋಗಿಸುವುದಾಗಿದೆ. ಆದರೆ ಬಿಜೆಪಿ ಸರ್ಕಾರ ಹಣ ಹಾಕಲಿಲ್ಲ, ರೈತರು, ಸಣ್ಣ ಪುಟ್ಟ ವ್ಯಾಪಾರಿಗಳು, ಕಾರ್ಮಿಕರ ಜೇಬಿನಿಂದ ಹಣ ಲೂಟಿ ಮಾಡಿದ್ದಾರೆ.

ಪ್ರತಿ ಕೆಲಸದಲ್ಲಿ 40% ಲೂಟಿ ಮಾಡಿದ್ದಾರೆ. ಈ ಬಗ್ಗೆ ಪ್ರಧಾನಿಗೆ ಗೊತ್ತಿಲ್ಲದ ವಿಚಾರವಲ್ಲ. ಪ್ರಧಾನಮಂತ್ರಿಗಳಿಗೆ ಎಲ್ಲವೂ ಗೊತ್ತಿದೆ. ಗುತ್ತಿಗೆದಾರರ ಸಂಘ, ರುಪ್ಸಾ ಸಂಸ್ಥೆ ಕರ್ನಾಟಕದಲ್ಲಿ 40% ಕಮಿಷನ್ ಪಡೆಯುತ್ತಿದ್ದಾರೆ ಎಂದು ಪತ್ರ ಬರೆದಿದ್ದಾರೆ. ದಿಂಗಾಲೇಶ್ವರ ಸ್ವಾಮೀಜಿಗಳು ಮಠಗಳಿಗೆ 30% ಕಮಿಷನ್ ಪಡೆಯಲಾಗಿದೆ ಎಂದಿದ್ದಾರೆ. ಪಿಎಸ್ಐ, ಸಹಕಾರಿ ಬ್ಯಾಂಕ್, ಸಹಾಯಕ ಪ್ರಾಧ್ಯಾಪಕರು, ಜೆಇಇ ಸೇ–ರಿದಂತೆ ಎಲ್ಲಾ ನೇಮಕಾತಿಗಳಲ್ಲಿ ಅಕ್ರಮವಾಗಿದೆ. ಬಿಜೆಪಿ ಶಾಸಕರೇ ಬಿಜೆಪಿಯಲ್ಲಿ ಮುಖ್ಯಮಂತ್ರಿ ಸ್ಥಾನವನ್ನು 2500 ಕೋಟಿಗೆ ಮಾರಾಟವಾಗುತ್ತದೆ ಎಂದು ಹೇಳಿದ್ದಾರೆ. ಕರ್ನಾಟಕದ ಮಕ್ಕಳಿಗೇಈ ಭ್ರಷ್ಟಾಚಾರದ ಬಗ್ಗೆ ಗೊತ್ತಿರುವಾಗ, ಪ್ರಧಾನಿಗೂ ಗೊತ್ತಿರುತ್ತದೆ.

ಕಳೆದ ಮೂರು ವರ್ಷಗಳಿಂದ ಕರ್ನಾಟಕದಲ್ಲಿ 40% ಕಮಿಷನ್ ಭ್ರಷ್ಟಾಚಾರ ನಡೆಯುತ್ತಿರುವುದು ಗೊತ್ತಿದ್ದರೂ ಇದನ್ನು ತಡೆಯಲು ಪ್ರಧಾನಮಂತ್ರಿಗಳು ಯಾವ ಕ್ರಮ ಕೈಗೊಂಡಿದ್ದಾರೆ? ನೀವು ಈ ಲೂಟಿ ನಿಲ್ಲುವ ಪ್ರಯತ್ನ ಮಾಡಿದ್ದೀರಾ? ಭ್ರಷ್ಟರನ್ನು ಹಿಡಿಯುವ ಪ್ರಯತ್ನ ಮಾಡಿಲ್ಲ ಯಾಕೆ? ಆದರೆ ಈಗ ಚುನಾವಣೆ ಸಮಯದಲ್ಲಿ ರಾಜ್ಯಕ್ಕೆ ಬಂದು ಮತ ಕೇಳುತ್ತಿದ್ದೀರಿ. ಈ ಸಮಯದಲ್ಲಿ ನೀವು ಭ್ರಷ್ಟಾಚಾರ ತಡೆಯಲು ಯಾವ ಕ್ರಮ ಕೈಗೊಂಡಿದ್ದೀರಿ ಎಂದು ಸ್ಪಷ್ಟನೆ ನೀಡಬೇಕು. ಕರ್ನಾಟಕಿಂದ ಬರುವ ತೆರಿಗೆಯಲ್ಲಿ ಸಿಗಬೇಕಾದ ಪಾಲು ರಾಜ್ಯಕ್ಕೆ ಸಿಗುತ್ತಿಲ್ಲ. ಅದು ಯಾಕೆ ಎಂದು ಜನರಿಗೆ ಹೇಳಿ. ಕರ್ನಾಟಕದಲ್ಲಿ ನೆರೆ ಬಂದಾಗ ಜನರಿಗಾಗಿ ಏನು ಪರಿಹಾರ ನೀಡಿದ್ದೀರಿ?

ಗೋವಾ, ಮಹಾರಾಷ್ಟ್ರ, ಕರ್ನಾಟಕ ನಡುವೆ ಗೊಂದಲವಿರುವ ನದಿ ನೀರು ಹಂಚಿಕೆ ವಿಚಾರವಾಗಿ ಇರುವ ಗೊಂದಲದಲ್ಲಿ ನೀವು ಯಾವ ರೀತಿಯ ಸಹಾಯ ಮಾಡಿದ್ದೀರಿ? ಚುನಾವಣೆ ಸಮಯದಲ್ಲಿ ಬಂದು ನೀವು ರಾಜ್ಯದ ಬಗ್ಗೆ ಮಾತನಾಡುವ ಬದಲು ನಿಮ್ಮ ಮಾತನ್ನು ಹೇಳುತ್ತೀರಿ. ಕಳೆದ ಮೂರು ವರ್ಷಗಳಿಂದ ನಿಮ್ಮ ಸರ್ಕಾರ ಏನು ಮಾಡಿದೆ ಎಂದು ಹೇಳಿ. ಮುಂದಿನ ಐದು ವರ್ಷಗಳಲ್ಲಿ ಏನು ಮಾಡುತ್ತೇವೆ ಎಂದು ಹೇಳಿ. ಯುವಕರು, ಆರೋಗ್ಯ, ಶಿಕ್ಷಣ, ಭ್ರಷ್ಟಾಚಾರ ನಿರ್ಮೂಲನೆ, ಮೂಲಸೌಕರ್ಯ ಅಭಿವೃದ್ಧಿಗೆ ಏನು ಮಾಡುತ್ತೀರಿ ಎಂದು ಹೇಳಿ. ಈ ಚುನಾವಣೆ ನಿಮಗಾಗಿ ನಡೆಯುತ್ತಿರುವುದಲ್ಲ, ಈ ಚುನಾವಣೆ ಕರ್ನಾಟಕ ಹಾಗೂ ಅದರ ಜನರ ಭವಿಷ್ಯಕ್ಕಾಗಿ ನಡೆಯುತ್ತಿರುವ ಚುನಾವಣೆ.

ನೀವು ಚುನಾವಣೆ ,ಮಯದಲ್ಲಿ ಬಂದು ಕಾಂಗ್ರೆಸ್ ನವರು ನನ್ನ ವಿರುದ್ಧ 91 ಬಾರಿ ಆಕ್ರಮಣ ಮಾಡಿದ್ದಾರೆ ಎಂದು ಹೇಳುತ್ತೀರಿ. ಆದರೆ ನೀವು ಕರ್ನಾಟಕಕ್ಕಾಗಿ ನೀವು ಏನು ಮಾಡಿದ್ದೀರಿ ಎಂದು ಹೇಳುತ್ತಿಲ್ಲ. ನಿಮ್ಮ ಮುಂದಿನ ಭಾಷಣಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಜನರಿಗೆ ಏನು ಮಾಡಿದ್ದೀರಿ? ಮುಂದೆ ಐದು ವರ್ಷಗಳಲ್ಲಿ ಏನು ಮಾಡುತ್ತೀರಿ ಎಂದು ಹೇಳಿ.

ನಾವು ಇಲ್ಲಿಗೆ ಬಂದಾಗ, ಸಿದ್ದರಾಮಯ್ಯ ಏನು ಮಾಡಿದ್ದಾರೆ, ಡಿ.ಕೆ. ಶಿವಕುಮಾರ್ ಅವರು ಏನು ಮಾಡಲಿದ್ದಾರೆ ಎಂಬ ವಿಚಾರವನ್ನು ನಾವು ಚರ್ಚೆ ಮಾಡುತ್ತೇವೆ. ನಾವು ನಮ್ಮ ಎಲ್ಲಾ ನಾಯಕರ ಹೆಸರು ಹೇಳುತ್ತೇವೆ. ಆದರೆ ನೀವು ಬಂದರೆ ನಿಮ್ಮ ಮುಖ್ಯಮಂತ್ರಿಗಳ ಹೆಸರನ್ನು ಪ್ರಸ್ತಾಪಿಸುವುದಿಲ್ಲ. ನಿಮ್ಮ ಭಾ,ಣ ಕೇವಲ ಮೋದಿ ಅವರ ಬಗ್ಗೆ ಮಾತ್ರ ಆಗಿರುತ್ತದೆ. ನೀವು ನಿಮ್ಮ ಭಾಷಣದಲ್ಲಿ ಯಡಿಯೂರಪ್ಪ ಹಾಗೂ ಬೊಮ್ಮಾಯಿ ಅವರ ಹೆಸರು ಪ್ರಸ್ತಾಪಿಸಿ, ಅವರಿಗೂ ಖುಷಿಯಾಗಲಿ. ನಾವು ಅಧಿಕಾರಕ್ಕೆ ಬಂದರೆ, ರೈತರು, ಯುವಕರು, ಬಡವರಿಗಾಗಿ ಏನು ಮಾಡುತ್ತೇವೆ ಎಂದು ನಾನು ಹೇಳುತ್ತೇನೆ. ಕಳೆದ ಮೂರು ವರ್ಷಗಳಲ್ಲಿ ಲಕ್ಷಾಂತರ ಕೋಟಿ ನಿಮ್ಮಂದ ಲೂಟಿ ಮಾಡಲಾಗಿದ್ದು, ಈ ಹಿನ್ನೆಲೆಯಲ್ಲಿ ಮುಂದಿನ ಐದು ವರ್ಷಗಳ ಕಾಲ ನಿಮ್ಮ ಹಣವನ್ನು ನಿಮಗೆ ಹಿಂತಿರುಗಿಸುತ್ತೇವೆ. ಬಿಜೆಪಿ ಲೂಟಿ ಮಾಡಿರುವ ಅಷ್ಟೂ ಹಣವನ್ನು ನಿಮ್ಮ ಜೇಬಿಗೆ ತುಂಬಿಸುವ ಕೆಲಸ ಮಾಡುತ್ತೇವೆ. ಬಿಜೆಪಿ ಮಾಡಿದ ಲೂಟಿಯಲ್ಲಿ ಅತಿ ಹೆಚ್ಚಿನ ಲೂಟಿ ಮಾಡಿರುವುದು ಮಹಿಳೆಯರ ಹಣ. ಒಂದೆಡೆ 40% ಕಮಿಷನ್ ಲೂಟಿ ಮಾಡಿದೆ, ಮತ್ತೊಂದೆಡೆ ಅವರು ಬೆಲೆ ಏರಿಕೆ ಮೂಲಕ ನಿಮ್ಮ ಜೇಬನ್ನು ಲೂಟಿ ಮಾಡಿದ್ದಾರೆ.

# ಚುನಾವಣೆ: ಜಾತಿ ಲೆಕ್ಕಾಚಾರ ನಂಬಿಕೊಂಡ ಬಿಜೆಪಿ, ಆಡಳಿತ ವಿರೋಧಿ ಅಲೆ ನೆಚ್ಚಿಕೊಂಡ ಕಾಂಗ್ರೆಸ್

**ಎಚ್.ಮಾರುತಿ**

ರಾಜ್ಯ ವಿಧಾನಸಭಾ ಚುನಾವಣೆಗೆ ಕೆಲವೇ ದಿನಗಳು ಬಾಕಿ ಉಳಿದಿದ್ದು ಎಲ್ಲ ಪಕ್ಷಗಳು ಬಿರುಸಿನ ಪ್ರಚಾರದಲ್ಲಿ ತೊಡಗಿವೆ. ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್‌ನ ರಾಷ್ಟ್ರೀಯ ಮುಖಂಡರು ರಾಜ್ಯದಲ್ಲೇ ಬೀಡು ಬಿಟ್ಟಿದ್ದಾರೆ. ಪ್ರತಿ

ಜಿಲ್ಲೆ ಮತ್ತು ಪ್ರತಿ ಕ್ಷೇತ್ರಕ್ಕೂ ಉಸ್ತುವಾರಿಯನ್ನು ನೇಮಕ ಮಾಡುವ ಮೂಲಕ ಹದ್ದಿನ ಕಣ್ಣಿಟ್ಟಿದ್ದಾರೆ. ಸ್ವಂತ ಬಲದ ಮೇಲೆ ತಮ್ಮ ತಮ್ಮ ಪಕ್ಷವನ್ನು ಅಧಿಕಾರಕ್ಕೆ ತರಲು ಕಸರತ್ತು ನಡೆಸುತ್ತಿದ್ದಾರೆ. ಆದರೆ ಮತದಾರನ ಮನಸ್ಸಿನಲ್ಲಿ ಏನಿದೆ ಎಂದು ಆತನಿಗೆ

ಮಾತ್ರ ತಿಳಿದಿದೆ. ಮೇ 10ರಂದು ಮತದಾನ ನಡೆಯಲಿದ್ದು, ಮೇ 13ರಂದು ಫಲಿತಾಂಶ

ಹೊರಬೀಳಲಿದೆ.

ಬಿಜೆಪಿ ಪರವಾಗಿ ಸ್ವತಃ ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ, ಜೆ.ಪಿ.ನಡ್ಡಾ ಮೊದಲಾದ ಮುಖಂಡರು ಪ್ರಚಾರ ನಡೆಸುತತಿದ್ದಾರೆ. ಕಾಂಗ್ರೆಸ್ ಪರವಾಗಿ ಪಕ್ಷದ ವ–ರಿಷ್ಠರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಅವರು ನಿರಂತರವಾಗಿ ರಾಜ್ಯ ಪ್ರವಾಸ ನಡೆಸುತ್ತಿದ್ದಾರೆ. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ರಾಜ್ಯದವರೇ

ಆಗಿರುವುದು ಕಾಂಗ್ರೆಸ್‌ಗೆ ಪ್ಲಸ್ ಪಾಯಿಂಟ್.

ಜೆಡಿಎಸ್ ಪ್ರಚಾರದಲ್ಲಿ ಹಿಂದೆ ಬಿದ್ದಿಲ್ಲ. ಪಕ್ಷದ ವರಿಷ್ಠ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ರಾಜ್ಯ ಸುತ್ತುತ್ತಿದ್ದಾರೆ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ತಮ್ಮ ಆರೋಗ್ಯವನ್ನೂ ಲೆಕ್ಕಿಸದೆ ಪ್ರಚಾರದಲ್ಲಿ ಭಾಗಿಯಾಗುತ್ತಿದ್ದಾರೆ.

ಈ ಎಲ್ಲ ಪಕ್ಷಗಳಿಗೂ ಪ್ಲಸ್ ಮತ್ತು ಮೈನಸ್ ಪಾಯಿಂಟ್‌ಗಳಿವೆ. ಸಧ್ಯದ ಮಟ್ಟಿಗೆ ಯಾವುದೇ

ಪಕ್ಷ 113ರ ಗುರಿ ತಲುಪುವ ಸಾಧ್ಯತೆಗಳು ಕಡಿಮೆ ಎಂದು ರಾಜಕೀಯ ಪಕ್ಷಗಳೂ ಒಪ್ಪಿಕೊಳ್ಳುತ್ತವೆ ಮತ್ತು ರಾಜಕೀಯ ವಿಶ್ಲೇಷಕರೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಯಾವುದೇ ರಾಜಕೀಯ ಪಕ್ಷ ಎಲ್ಲ ಕ್ಷೇತ್ರ ಮತ್ತು ಎಲ್ಲ ವಿಭಾಗಗಳಲ್ಲಿ ಒಂದೇ ತೆರನಾದ ಪ್ರಭಾವ ಬೀರುವಂತೆ ಇರುವುದಿಲ್ಲ. ಕೆಲವು ಭಾಗಗಳಲ್ಲಿ

ಬಲವಾಗಿದ್ದರೆ ಇನ್ನೂ ಕೆಲವು ಭಾಗಗಳಲ್ಲಿ ಶಕ್ತಿಯೇ ಇರುವುದಿಲ್ಲ. ಉದಾಹರಣೆಗೆ ಜೆಡಿಎಸ್ ಹಳೇ ಮೈಸೂರು ಭಾಗದಲ್ಲಿ ಪ್ರಾಬಲ್ಯ ಹೊಂದಿದ್ದರೆ ಕರಾವಳಿ ಭಾಗದಲ್ಲಿ ಅಸ್ತಿತ್ವ ಇಲ್ಲ. ಕರಾವಳಿ ಭಾಗದಲ್ಲಿ ಯಾರನ್ನು ಬೇಕಾದರೂ ನಿಲ್ಲಿಸಿ

ಗೆಲ್ಲಿಸಿಕೊಳ್ಳುವ ಶಕ್ತಿ ಇರುವ ಬಿಜೆಪಿ ಹಳೇ ಮೈಸೂರು ಭಾಗದಲ್ಲಿ ಗೆಲುವು ದಾಖಲಿಸಲು ಹರಸಾಹಸ ಪಡುತ್ತಿದೆ. ಬಿಜೆಪಿ ಪ್ರಾಬಲ್ಯವಿರುವ ಜಿಲ್ಲೆಗಳಲ್ಲಿ ಕಾಂಗ್ರೆಸ್ ದುರ್ಬಲವಾಗಿರುವುದು ಗೋಚರಿಸುತ್ತಿದೆ.

ಪ್ರಮುಖವಾಗಿ ಮೂರೂ ಪಕ್ಷಗಳು ಜಾತಿ, ಭ್ರಷ್ಟಾಚಾರ, ಧರ್ಮ ಮತ್ತು ಭಿನ್ನಮತ ಕುರಿತೇ

ಗಿರಕಿ ಹೊಡೆಯುತ್ತಿವೆ. ಮತದಾರನೂ ಈ ಅಂಶಗಳನ್ನೇ ಪರಿಗಣಿಸುತ್ತಾನೆ ಎನ್ನುವುದು

ಮುಖ್ಯ. ರಾಜ್ಯದಲ್ಲಿ ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯಗಳು ಪ್ರಮುಖ ಪಾತ್ರವಹಿಸುತ್ತವೆ. ಲಿಂಗಾಯತ ಮತಗಳ ಮೇಲೆ ಬಿಜೆಪಿ ಮತು ಕಾಂಗ್ರೆಸ್ ಅವಲಂಬಿತವಾಗಿದ್ದರೆ ಜೆಡಿಎಸ್ ಒಕ್ಕಲಿಗ ಮತಗಳನ್ನು ಅವಲಂಬಿಸಿದೆ. ಒಕ್ಕಲಿಗ ಪ್ರಾಬಲ್ಯವಿರುವ ಕ್ಷೇತ್ರಗಳಲ್ಲಿ ನೆಲೆ ಕಂಡುಕೊಳ್ಳಲು ಬಿಜೆಪಿ ಹವಣಿಸುತ್ತಿದೆ. ಈ ನಿಟ್ಟಿನಲ್ಲಿ ಬಿಜೆಪಿ 47 ಒಕ್ಕಲಿಗರಿಗೆ ಟಿಕೆಟ್ ನೀಡಿದೆ. 2018ರಲ್ಲಿ 34 ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು ಎನ್ನುವುದು ಗಮನಾರ್ಹ. ಕಾಂಗ್ರೆಸ್ ಸಹ ಕಳೆದ ಬಾರಿಗಿಂತ ಇಬ್ಬರಿಗೆ ಹೆಚ್ಚಾಗಿ ಅಂ–ದರೆ 43ಒಕ್ಕಲಿಗರಿಗೆ ಟಿಕೆಟ್ ನೀಡಿದೆ. ಒಕ್ಕಲಿಗರ ಪಕ್ಷ ಎಂದೇ ಬಿಂಬಿತವಾಗಿರುವ ಜೆಡಿಎಸ್ ಈ ಬಾರಿ 45 ಒಕ್ಕಲಿಗ ಅಭ್ಯರ್ಥಿಗಳನ್ನು

ಹುರಿಯಾಳುಗಳನ್ನಾಗಿಸಿದೆ. ಜೆಡಿಎಸ್‌ನಲ್ಲಿ 24 ಒಕ್ಕಲಿಗ ಶಾಸಕರಿದ್ದಾರೆ ಎನ್ನುವುದು ಗಮನಾರ್ಹ.

ಶೇ.17ರಷ್ಟಿರುವ ಲಿಂಗಾಯತರು ಯಡಿಯೂರಪ್ಪ ಅವರ ಕಾರಣಕ್ಕಾಗಿ ಬಿಜೆಪಿಯನ್ನು ಬೆಂಬಲಿಸುತ್ತಾ ಬಂದಿದ್ದರು. ಈ ಬಾರಿ ಅದೇ ಪ್ರಮಾಣದ ಬೆಂಬಲವನ್ನು ನಿರೀಕ್ಷಿಸುವಂತಿಲ್ಲ. ಈ ಕಾರಣಕ್ಕಾಗಿಯೇ ಬಿಜೆಪಿ ಈ ಬಾರಿ 68 ಲಿಂಗಾಯತರಿಗೆ ಟಿಕೆಟ್ ನೀಡಿದೆ. ಕಾಂಗ್ರೆಸ್ 2018ರಲ್ಲಿ 43 ಲಿಂಗಾಯತರಿಗೆ ಟಿಕೆಟ್ ನೀಡಿದ್ದು ಈ ಬಾರಿ 51 ಮಂದಿಗೆ ಅವಕಾಶ ಕಲ್ಪಿಸಿದೆ.

ಎಸ್ ಸಿ ಎಸ್ ಟಿ ಸಮುದಾಯದ ಜನಸಂಖ್ಯೆ ಶೇ.24ರಷ್ಟಿದ್ದು, ಮೂರೂ ಪಕ್ಷಗಳೂ ಈ ಸಮುದಾಯಗಳ ಓಲೈಕೆಯಲ್ಲಿ ತೊಡಗಿವೆ. ಅಹಿಂದ ಮತಗಳು ಕಾಂಗ್ರೆಸ್ ಬೆಂಬಲಕ್ಕೆ ನಿಂತಿದ್ದು ಈ ವೋಟ್ ಬ್ಯಾಂಕ್‌ಅನ್ನು ಬಿಜೆಪಿ ಛಿದ್ರಗೊಳಿಸಲಿದೆ ಎಂದು ಭಾವಿಸಲಾಗಿದೆ.

ಕಳೆದ ಮೂರು ಚುನಾವಣೆಗಳಲ್ಲಿ ಸ್ಥಾನಗಳ ಗಳಿಕೆಯಲ್ಲಿ ಬಿಜೆಪಿ ಮೊದಲನೆಯ ಪಕ್ಷವಾಗಿದ್ದರೂ ಬಹುಮತ ಪಡೆಯಲು ಸಾಧ್ಯವಾಗಿರಲಿಲ್ಲ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದ ಬಿಜೆಪಿ 113 ಗುರಿ ತಲುಪಲು

ಸಾಧ್ಯವಾಗಿರಲಿಲ್ಲ. ಈ ಭಾರಿಯೂ ಬಿಜೆಪಿ ಸ್ವತಂತ್ರವಾಗಿ ಅಧಿಕಾರ ಹಿಡಿಯಲಿದೆ ಎಂದು ಭಾವಿಸಬೇಕಿಲ್ಲ. ನಕಾರಾತ್ಮಕ ಅಂಶಗಳೂ ಪಕ್ಷವನ್ನು ಸೋಲಿನ ದವಡೆಗೆ ದೂಡುವ ಸಾಧ್ಯತೆಗಳಿವೆ.


ಮೊದಲನೆಯದಾಗಿ 1980ರ ದಶಕದಿಂದ ರಾಜ್ಯದಲ್ಲಿ ಪಕ್ಷವನ್ನು ಕಟ್ಟಿ ಬೆಳೆಸಿದ್ದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ರಾಜಕೀಯ ನಿವೃತ್ತಿ ಹೊಂದಿರುವುದು. ಅವರು ಕೇವಲ ವೀರಶೈವ ಲಿಂಗಾಯತ ಮಾತ್ರವಲ್ಲದೆ ರಾಜ್ಯದ ಎಲ್ಲ ಸಮುದಾಯಗಳ ಮೆಚ್ಚುಗೆಗೆ ಪಾತ್ರರಾಗಿದ್ದರು. ಪಕ್ಷಕ್ಕಿಂತ ಹೆಚ್ಚಾಗಿ ಯಡಿಯೂರಪ್ಪ ಮುಖ್ಯಮಂತ್ರಿಯಾಗುತ್ತಾರೆ.ಎಂಬ ಕಾರಣಕ್ಕಾಗಿ ಹಲವು ಕ್ಷೇತ್ರಗಳಲ್ಲಿ ಗೆಲುವು ಸುಲಭವಾಗುತ್ತಿತ್ತು. ಆದರೆ ಈಗ ಅವರ ಕೈಗಳನ್ನು ಕಟ್ಟಿ ಹಾಕಲಾಗಿದೆ. ಶೇ.17ರಷ್ಟಿರುವ ಲಿಂಗಾಯತರು ಯಡಿಯೂರಪ್ಪ ಅವರ ಕಾರಣ–ಕ್ಕಾಗಿ ಬಿಜೆಪಿಯನ್ನು ಬೆಂಬಲಿಸುತ್ತಾ ಬಂದಿದ್ದರು. ಈ ಹಿಂದಿನ ಎಲ್ಲ ಚುನಾವಣೆಗಳಲ್ಲಿ ಯಡಿಯೂರಪ್ಪ ಅವರು ಮುಖ್ಯಮಂತ್ರಿ

ಅಭ್ಯರ್ಥಿಯಾಗಿದ್ದರು. ಆದರೆ ಈ ಬಾರಿ ಅವರು ಕಣದಲ್ಲಿ ಇಲ್ಲ. ಈ ಮೂಲಕ ಬಿಜೆಪಿ ಮೊದಲ

ಬಾರಿಗೆ ಮುಖ್ಯಮಂತ್ರಿ ಅಭ್ಯರ್ಥಿ ಇಲ್ಲದೆ ಚುನಾವಣೆ ಎದುರಿಸುತ್ತಿದೆ. ಈ ಶೂನ್ಯತೆಯ ಜತೆಗೆ ಆಡಳಿತ ವಿರೋಧಿ ಅಲೆ ತುಸು ಹೆಚ್ಚು ಎಂದೇ ಹೇಳಬಹುದು. ಭ್ರಷ್ಟಾಚಾರದ ಆರೋಪಗಳು ಬಹುತೇಕ ಇಲಾಖೆಗಳಿಂದ ಕೇಳಿ ಬಂದಿವೆ.

ಎಲ್ಲಕ್ಕಿಂತ ಹೆಚ್ಚಾಗಿ 1989ರಿಂದ ಯವುದೇ ಪಕ್ಷ ಎರಡನೇ ಬಾರಿಗೆ ಅಧಿಕಾರ ಹಿಡಿಯಲು ಸಾಧ್ಯವಾಗಿಲ್ಲ.

ಕಾಂಗ್ರೆಸ್ ಪರಿಸ್ಥಿತಿ ಸುಧಾರಿಸಿರುವುದು ಎದ್ದು ಕಾಣುತ್ತಿದೆ.



ಸ್ಪಷ್ಟ ಬಹುಮತದಿಂದ ಅಧಿಕಾರ ಹಿಡಿದೇ ಬಿಟ್ಟಿದ್ದೇವೆ ಎಂದು ಬೀಗುತ್ತಿದ್ದಾರೆ. ಗೆಲುವು ಮರೀಚಿಕೆ ಎನ್ನುವುದು ಅವರಿಗೂ ತಿಳಿದಿರುತ್ತದೆ. 2018 ರಲ್ಲಿ ಶೇ.38ಮತಗಳಿಕೆಯೊಂದಿಗೆ 80

ಸ್ಥಾನಗಳಲ್ಲಿ ಗೆಲುವು ಸಾಧಿಸಿದ್ದರು. ಆದರೆ ಆಪರೇಷನ್ ಕಮಲಕ್ಕೆ 17 ಶಾಸಕರು ರಾಜೀನಾಮೆ ನೀಡಿದ್ದರಿಂದ ಪಕ್ಷದ ಬಲ 69ಕ್ಕೆ ಕುಸಿದಿದೆ.

ಹಾಗೆಂದು ಕಾಂಗ್ರೆಸ್‌ಗೆ ನಕಾರಾತ್ಮಕ ಅಂಶಗಳು ಇಲ್ಲ ಎಂದಿಲ್ಲ. ಮುಖ್ಯಮಂತ್ರಿ ಹುದ್ದೆಗಾಗಿ ಸಿದ್ದರಾಮಯ್ಯ ಮತ್ತು ಶಿವಕುಮಾರ್ ನಡುವಿನ ಆಂತರಿಕ ಕಲಹ ಅಲ್ಲಲ್ಲಿ ಹೊಡೆತ ನೀಡುವುದರಲ್ಲಿ ಆಶ್ಚರ್ಯವಿಲ್ಲ. ಆಡಳಿತ ವಿರೋಧಿ ಅಲೆ ಮತ್ತು ಭ್ರಷ್ಟಾಚಾರ

ಪ್ರಕರಣಗಳನ್ನು ಕಾಂಗ್ರೆಸ್ ಸಮರ್ಥವಾಗಿ ಬಳಸಿಕೊಂಡಿದೆ. ಪೇಸಿಎಂ ಅಭಿಯಾನದಂತಹ

ಅಭಿಯಾನಗಳು ಒಂದಿಷ್ಟು ಬಲ ತಂದುಕೊಟ್ಟಿದೆ.

ಅಂತಿಮವಾಗಿ ಜೆಡಿಎಸ್ ಧೂಳಿನಿಂದ ಎದ್ದು ಬರುವ ಎಲ್ಲ ಲಕ್ಷಣಗಳನ್ನು ಹೊಂದಿದೆ. ಎರಡೂ

ರಾಷ್ಟ್ರೀಯ ಪಕ್ಷಗಳು ಉದಾಸೀನ ಮಾಡುವ ಹಾಗಿಲ್ಲ. ಸತತ ಎರಡು ತಿಂಗಳ ಕಾಲ ನಡೆಸಿದ

ಪಂಚರತ್ನ ಯಾತ್ರೆಗೆ ಉತ್ತರ ಕರ್ನಾಟಕದಲ್ಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿರುವುದು

ಗಮನಿಸಬೇಕಾದ ಸಂಗತಿ. ಎಂದಿನಂತೆ ಒಕ್ಕಲಿಗ ಪ್ರಾಬಲ್ಯವಿರುವ ಹಳೇ ಮೈಸೂರು ಭಾಗದಲ್ಲಿ

ಪಕ್ಷ ಬಲವಾಗಿ ನೆಲೆ ಕಂಡುಕೊಂಡಿದೆ. ಈ ಪಕ್ಷದ ಬೇರುಗಳನ್ನು ಅಲುಗಾಡಿಸುವುದು ಅಷ್ಟೊಂದು ಸುಲಭವಲ್ಲ. 209 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದರೂ ಪಕ್ಷದ ವರಿಷ್ಠರು ಗಮನ ಹರಿಸುವುದು 30–40 ಸ್ಥಾನಗಳಿಗೆ ಮಾತ್ರ. ತಮ್ಮ ಶಕ್ತಿ ಇಷ್ಟೇ ಎಂಬ ಅರಿವು ಅವರಿಗಿದೆ. ಕಳೆದ ಬಾರಿಗಿಂತ ಹೆಚ್ಚಿನ ಸ್ಥಾನಗಳನ್ನು ಪಡೆಯುವ

ಸಾಧ್ಯತೆಗಳಿವೆ. ಜೆಡಿಎಸ್‌ಗೆ ಒಕ್ಕಲಿಗರಾದ ಕುಮಾರಸ್ವಾಮಿ ಮತ್ತು ದೇವೇಗೌಡರನ್ನು ಹೊರತುಪಡಿಸಿದರೆ ಎರಡನೇ ಹಂತದ ನಾಯಕರಿಲ್ಲದಿರುವುದು ಮೈನಸ್ ಪಾಯಿಂಟ್. ಹಾಸನ ಕ್ಷೇತ್ರದ ಅಭ್ಯರ್ಥಿ ಆಯ್ಕೆ ಕಗ್ಗಂಟಾಗಿ ಪರಿಣಮಿಸಿದ್ದು ಒಂದಿಷ್ಟು ಹೊಡೆತ ನೀಡಿದರೂ ಅಚ್ಚರಿ ಇಲ್ಲ. ಈ ಭಾಗದಲ್ಲಿ ಬಿಜೆಪಿ ತನ್ನ ಶೇ.ವಾರು ಮತಗಳಿಕೆಯನ್ನು ಹೆಚ್ಚಿಸಿಕೊಳ್ಳುವುದು ನಿರೀಕ್ಷಿತ. ಬಿಜೆಪಿ ಕಾಂಗ್ರೆಸ್ ಮತಗಳನ್ನು ಕಿತ್ತರೆ ಜೆಡಿಎಸ್ ಸೇಫ್. ಅಕಸ್ಮಾತ್ ಜೆಡಿಎಸ್ ಮತಬುಟ್ಟಿಗೆ ಕೈ ಹಾಕಿದರೆ ನಿರೀಕ್ಷಿತ ಫಲಿತಾಂಶ ಕಷ್ಟ ಸಾಧ್ಯವಾಗಲೂಬಹುದು. ಒಟ್ಟಾರೆ ಜೆಡಿಎಸ್‌ಗೆ ಬೇಕಿರುವುದು ಅತಂತ್ರ ವಿಧಾನಸಭೆ.

ಮೂರೂ ಪಕ್ಷಗಳಲ್ಲಿ ಮಾಸ್ ಲೀಡರ್‌ಗಳ ಕೊರತೆಯಿದೆ. ಇರುವವರು ತಮ್ಮ ತಮ್ಮ ಜಾತಿಗಳಿಗೆ

ತಮ್ಮನ್ನು ಸೀಮಿತಗೊಳಿಸಿಕೊಳ್ಳುತ್ತಿದ್ದಾರೆ. ಮೂರೂ ಪಕ್ಷಗಳಲ್ಲಿ ಮುಖ್ಯಮಂತ್ರಿ, ಕೇಂದ್ರ ಮತ್ತು ರಾಜ್ಯದಲ್ಲಿ ಸಚಿವ ಸ್ಥಾನ, ಪಕ್ಷದ ಅಧ್ಯಕ್ಷ ಸ್ಥಾನಗಳನ್ನು

ಅಲಂಕರಿಸಿದವರೂ ರಾಜ್ಯವ್ಯಾಪಿ ಪ್ರಭಾವ ಹೊಂದಿಲ್ಲ. ಮೂರೂ ಪಕ್ಷಗಳು ರಾಜ್ಯವನ್ನಾಳಿವೆ. ಆದರೆ ಯವುದೇ ಪಕ್ಷದಲ್ಲೂ ಮಾಸ್ ಲೀಡರ್ ಎದ್ದು ಕಾಣುತ್ತಿಲ್ಲ..ಒಂದು ಕಾಲದಲ್ಲಿ ರಾಮಕೃಷ್ಣ ಹೆಗಡೆ, ದೇವೇಗೌಡ ವೀರೇಂದ್ರ ಪಾಟೀಲ್ ದೇವರಾಜ ಅರಸು ಅವರಂತಹ ಜನಪ್ರಿಯ ನಾಯಕರಿದ್ದರು. ಅವರನ್ನು ಜಾತಿ ನಾಯಕರನ್ನಾಗಿ ಮತದಾರರು

ಪರಿಗಣಿಸುತ್ತಿರಲಿಲ್ಲ. ಈಗ ಅಂತಹ ನಾಯಕರ ಕೊರತೆಯನ್ನು ಮೂರೂ ಪಕ್ಷಗಳು ಅನುಭವಿಸುತ್ತಿವೆ. ವೀರೇಂದ್ರ ಪಾಟೀಲರು 224 ಕ್ಷೇತ್ರಗಳ ಪೈಕಿ 178 ಸ್ಥಾನಗಳಲ್ಲಿ ಗೆಲುವು ದಾಖಲಿಸಿದ್ದರು ಎಂದರೆ ಅವರ ಜನಪ್ರಿಯತೆ ಅರ್ಥವಾದೀತು.

ಬಿಜೆಪಿಯಲ್ಲಿ ಮಾಸ್ ಲೀಡರ್ ಎಂದರೆ ಬಿ.ಎಸ್. ಯಡಿಯೂರಪ್ಪ. ಅವರನ್ನು ಹೊರತುಪಡಿಸಿದರೆ ಇರುವವರೆಲ್ಲರೂ ನಾಯಕರು. ಆದರೆ ಅವರು ಮಾಸ್ ಲೀಡರ್ ಗಳಲ್ಲ. ಈ ಸತ್ಯದ ಅರಿವು ಗೊತ್ತಿದ್ದರೂ ಅವರನ್ನು ತರೆಮರೆಗೆ ಸರಿಸಲಾಗಿದೆ. ಟಿಕೆಟ್ ಹಂಚಿಕೆಯಿಂದ ಹಿಡಿದು ಪಕ್ಷದ ಯಾವುದೇ ವ್ಯವಹಾರಗಳಲ್ಲಿ ಮೂಗು ತೂರಿಸಲು ಅವರಿಗೆ ಅವರಿಗೆ ಅವಕಾಶ ಇಲ್ಲ. ಅನಿವಾರ್ಯವಾಗಿ

ಅವರನ್ನು ಪ್ರಚಾರಕ್ಕೆ ಮಾತ್ರ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಕಳೆದ ಎರಡು ಮೂರು

ವರ್ಷಗಳಿಂದ ಪಕ್ಷ ಬಿ.ಎಲ್.ಸಂತೋಷ್ ಅವರ ಹಿಡಿತದಲ್ಲಿದೆ. ಅವರಿಗೆ ಜಾತಿ ಬೆಂಬಲ ಇಲ್ಲ.

ಯಾವುದೇ ಚುನಾವಣೆಗಳಲ್ಲಿ ಸೋಲು ಗೆಲುವು ಕಂಡ ಅನುಭವ ಇಲ್ಲ. ಆದರೂ ಅವರು ಪಕ್ಷದ ಮೇಲೆ ಹಿಡಿತ ಸಾಧಿಸಿದ್ದಾರೆ. ಮುಖ್ಯಮಂತ್ರಿ ಆಗಬೇಕು ಎಂಬ ಅವರ ಆಸೆಗೆ ಅಡ್ಡಿ

ಬರುವವರನ್ನೆಲ್ಲಾ ತೆರೆಮರೆಗೆ ಸರಿಸಿದ್ದಾರೆ. ಯಡಿಯೂರಪ್ಪ, ಜಗದೀಶ ಶೆಟ್ಟರ್, ಈಶ್ವರಪ್ಪ, ಲಕ್ಷ್ಮಣ ಸವದಿ, ವಿ.ಸೋಮಣ್ಣ ಆರ್.ಅಶೋಕ್ ಇವರನ್ನೆಲ್ಲಾ ಪಕ್ಷದ ಚಟುವಟಿಕೆಗಳಿಂದ ದೂರವಿರಿಸಲಾಗಿದೆ,

ಕಾಂಗ್ರೆಸ್ ಪಕ್ಷದ ಮಾಸ್ ಲೀಡರ್ ಎಂದರೆ ಸಿದ್ದರಾಮಯ್ಯ. ಅವರು ಹೋದಲ್ಲೆಲ್ಲಾ.ಜನಜಂಗುಳಿ ಸ್ವಯಂಪ್ರೇರಿತರಾಗಿ ಸೇರುತ್ತಾರೆ. ಆದರೆ ಅವರಿಗೆ ಒಂದು ಸುರಕ್ಷಿತ ಕ್ಷೇತ್ರ ಇಲ್ಲದಿರುವುದು ಕಾಲದ ಮಹಿಮೆ ಇರಬಹುದು. ಬದಾಮಿಯಲ್ಲಿ ಸ್ಪರ್ಧೆ ಮಾಡಲು ಅವರೇ ನಿರಾಕರಿಸಿದ್ದಾರೆ. ಕೋಲಾರ ಆಯ್ಕೆ ಮಾಡಿಕೊಂಡಿದ್ದರೂ ಅಲ್ಲಿ ಗೆಲುವು ಸುಲಭ ಅಲ್ಲ ಎಂಬ ಕಾರಣಕ್ಕೆ ಹೈಕಮಾಂಡ್ ಅವರನ್ನು ಮರಳಿ ವರುಣಾಕ್ಕೆ ಕಳುಹಿಸಿದೆ. ಈ ಬಾರಿ ಪುತ್ರನೇ

ತಂದೆಗೆ ಕ್ಷೇತ್ರ ತ್ಯಾಗ ಮಾಡಬೇಕಾದ ಪರಿಸ್ಥಿತಿ ಎದುರಾಗಿದೆ. ಅಲ್ಲಿಯೂ ಬಿಜೆಪಿ ಮತ್ತು ಜೆಡಿಎಸ್ ಠಕ್ಕರ್ ಕೊಡಲು ಪ್ರತಿತಂತ್ರ ರೂಪಿಸಿವೆ. ಬಿಜೆಪಿ, ಸಚಿವ ಮತ್ತು ಪ್ರಭಾವಿ ಲಿಂಗಾಯತ ಮುಖಂಡ ವಿ.ಸೋಮಣ್ಣ ಅವರನ್ನು ಕಣಕ್ಕಿಳಿಸಿದ್ದರೆ ಜೆಡಿಎಸ್ ದಲಿತ ನಾಯಕ ಮಾಜಿ ಶಾಸಕ ಡಾ.ಭಾರತಿ ಶಂಕರ್ ಅವರನ್ನು ನಿಲ್ಲಿಸಿದೆ. ಈ ಮೂಲಕ ಎರಡೂ ಪಕ್ಷಗಳು

ಸಿದ್ದರಾಮಯ್ಯ ನೆಮ್ಮದಿಯಿಂದ ರಾಜ್ಯ ಪ್ರವಾಸ ಮಾಡಬಾರದು ಮತ್ತು ಹೆಚ್ಚು ಸಮಯವನ್ನು

ವರುಣಾದಲ್ಲಿಯೇ ಕಳೆಯಬೇಕಾದ ಸನ್ನಿವೇಶವನ್ನು ನಿರ್ಮಾಣ ಮಾಡಿವೆ.

ಇನ್ನು ಜೆಡಿಎಸ್‌ನಲ್ಲಿ ಮಾಸ್ ಲೀಡರ್ ಎಂದರೆ ಕುಮಾರಸ್ವಾಮಿ ಎನ್ನುವುದು ನಿರ್ವಿವಾದ. ಆದರೆ ಅವರ ಪರಿಸ್ಥಿತಿ ರಾಜ್ಯಕ್ಕಿಂತ ಹೆಚ್ಚಾಗಿ ಕುಟುಂಬ ವ್ಯವಹಾರದತ್ತ ಗಮನಹರಿಸುವಂತಾಗಿದೆ. ಹಾಸನದಲ್ಲಿ ಸಹೋದರ ಮತ್ತು ಮತ್ತು ನಾದಿನಿ ಕೊಟ್ಟ ಕಾಟ ಅಷ್ಟಿಷ್ಟಲ್ಲ. ಮನೆಯೊಳಗಿನ ಭಿನ್ನಮತದ ಬೆಂಕಿಯನ್ನು ನಂದಿಸುವಲ್ಲಿ ಕುಮಾರಸ್ವಾಮಿ ಅವರಿಗೆ ಸಾಕು ಸಾಕಾಗಿದ್ದು ಸುಳ್ಳಲ್ಲ. ಇವರ ಪ್ರಭಾವವೂ ರಾಜ್ಯವ್ಯಾಪಿ ಎಂದು ಹೇಳಲಾಗದು. 8–10 ಜಿಲ್ಲೆಗಳಲ್ಲಿ ಪ್ರಭಾವ ಬೀರಬಹುದಾದ ಶಕ್ತಿಯಂತೂ ಇದ್ದೇ ಇದೆ.

ಕುಮಾರಸ್ವಾಮಿ ಪಕ್ಷದ ವಿಸ್ತರಣೆಗಾಗಿ ಹುಬ್ಬಳ್ಳಿ–ಧಾರವಾಡದಲ್ಲಿ ವಿಶಾಲವಾದ

ಬಂಗಲೆಯೊಂದನ್ನು ಬಾಡಿಗೆ ಪಡೆದು ವಾರದಲ್ಲಿ ಕೆಲವು ದಿನ ಅಲ್ಲಿಯೇ ಉಳಿದು ಪಕ್ಷವನ್ನು

ಸಂಘಟಿಸಲು ನಿರ್ಧರಿಸಿದ್ದರು. ಆದರೆ ಅದು ಕಾರ್ಯರೂಪಕ್ಕೆ ಬರಲಿಲ್ಲ. ಪಂಚರತ್ನ

ಯಾತ್ರೆ ಯಶಸ್ಸು ದಾಖಲಿಸಿದೆಯಾದರೂ ಯಾತ್ರೆಗೆ ಬಂದವರೆಲ್ಲಾ ತೆನೆ ಹೊತ್ತ ಮಹಿಳೆಗೆ ಮತ

ಚಲಾಯಿಸುವುರೇ ಎಂದು ಹೇಳಲಾಗದು.

ಕಾಂಗ್ರೆಸ್ ವರಿಷ್ಠ ಡಿ.ಕೆ.ಶಿವಕುಮಾರ್ ಅಂತಹುದೇ ಪ್ರಯತ್ನವನ್ನು ನಡೆಸಿದ್ದರಾದರೂ ಬೇರು ಬಿಡಲು ಅವಕಾಶ ನೀಡಲಿಲ್ಲ. ಲಕ್ಷ್ಮೀ ಹೆಬ್ಬಾಳ್ಕರ್ ಅವರ ಮೂಲಕ ಬೆಳಗಾವಿಯಿಂದ ಪಕ್ಷವನ್ನು ಹಿಡಿತಕ್ಕೆ ತೆಗೆದುಕೊಂಡು ಮಾಸ್ ಲೀಡರ್ ಆಗುವ ಅವರ

ಯತ್ನಕ್ಕೆ ಜಾರಕಿಹೊಳಿ ಸಹೋದರರು ಅಡ್ಡಿಯಾದರು.

ಬಿಜೆಪಿ ಬಹುಮತ ಗಳಿಸಿದರೆ ಬಿ.ಎಲ್.ಸಂತೋಷ್ ಮುಖ್ಯಮಂತ್ರಿಯಾಗುವರೇ ಎನ್ನುವುದು ಮಿಲಿಯನ್ ಡಾಲರ್ ಪ್ರಶ್ನೆ. ಪಕ್ಷದೊಳಗಿನ ಬೆಳವಣಿಗೆಗಳನ್ನು ಅವಲೋಕಿಸಿದಾಗ ಅಂತಹುದೊಂದು ಸಾಧ್ಯತೆಯನು ತಳ್ಳಿ ಹಾಕುವಂತಿಲ್ಲ. ಪಕ್ಷದೊಳಗೆ ಸಂತೋಷ್ ಅವರಿಗೆ ಎದುರಾಡುವವರು ಯಾರೂ ಇಲ್ಲ. ಅಷ್ಟರ ಮಟ್ಟಿಗೆ ಅವರ ಹಿಡಿತವಿದೆ. ಇಂಡಿಯನ್ ಎಕ್ಸ್

ಪ್ರೆಸ್ ಪತ್ರಿಕೆ ಪ್ರಕಾರ ದೇಶದ ಪ್ರಭಾವಿ ವ್ಯಕ್ತಿಗಳಲ್ಲಿ ಸಂತೋಷ್ ಅವರೂ ಒಬ್ಬರು ಎಂದು ಗುರುತಿಸಿದೆ. ಇಂಜಿನಿಯರಿಂಗ್ ಪದವೀಧರರಾದ ಸಂತೋಷ್ ಮಧ್ಯಮ ಕುಟುಂಬದಿಂದ ಬಂದವರು. ಸಂಘ ಪರಿವಾರದ ಪೂರ್ಣಾವಧಿ ಕಾರ್ಯಕರ್ತರಾದ ಅವರು ಇದೀಗ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದಾರೆ. ಕರ್ನಾಟಕದ ಮಟ್ಟಿಗೆ ಅವರ ಮಾತೇ ಅಂತಿಮ. ಸಂಘ ಪರಿವಾರದಿಂದ ಬಂದ ನರೇಂದ್ರ ಮೋದಿ ಮುಖ್ಯಮಂತ್ರಿ ಮತ್ತು ಪ್ರಧಾನಿ ಆಗಬಹುದಾದರೆ ಸಂತೋಷ್ ಅವರು ಏಕಾಗಬಾರದು ಎಂದು ಪಕ್ಷದ ಮುಖಂಡರೊಬ್ಬರು ಪ್ರಶ್ನಿಸುತ್ತಾರೆ. ಹಿರಿತಲೆಗಳನ್ನೆಲ್ಲ ತೆರೆಮರೆಗೆ ಸರಿಸಿದಾಗ ಉಳಿಯುವುದು ಹೊಸ ಮುಖಗಳು. ಶಾಸಕಾಂಗ ಸಭೆಯಲ್ಲಿ ಸಂತೋಷ್ ಅಥವಾ ಕೇಂದ್ರ ಸಚಿವ ಪ್ರಲ್ಹಾದ ಜೋಷಿ ಅವರಲ್ಲಿ ಯಾರನ್ನೇ ಆಯ್ಕೆ ಮಾಡಿದರೂ ವಿರೋಧಿಸಲು ಒಬ್ಬರೂ ಇರುವುದಿಲ್ಲ. ರಾಜಕೀಯ ನಿಂತ ನೀರಲ್ಲ. ಸದಾ ಹರಿಯುವ ಚಲನಶೀಲತೆಯ ಗುಣವನ್ನು ಹೊಂದಿರುತ್ತದೆ. ಫಲಿತಾಂಶ ಹೊರಬಿದ್ದಾಗ ಬೇರೆಯದ್ದೇ ಲೆಕ್ಕಾಚಾರಗಳು ಹುಟ್ಟಿಕೊಳ್ಳಬಹುದು.

# ಸರ್ವ ಸಮುದಾಯಗಳ ಅಭಿವೃದ್ಧಿಗಾರ ರಮೇಶ ಜಾರಕಿಹೊಳಿ



ಬೆಳಗಾವಿ : ನಗರದ ಸಮೀಪ ಇರುವ ಗೋಕಾಕ ಮತಕ್ಷೇತ್ರದ ಅಂಕಲಗಿ ಎಂಬ ಪಟ್ಟಣದಲ್ಲಿ ಮಾಜಿ ಸಚಿವರು ಹಾಗೂ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾದ ರಮೇಶ ಜಾರಕಿಹೊಳಿ ಅವರು ತಮ್ಮ ಚುನಾವಣಾ ಪ್ರಚಾರ ಕಾರ್ಯವನ್ನು ಹಮ್ಮಿಕೊಂಡಿದರು.

ಸೋಮವಾರ ದಿನಾಂಕ ಒಂದರ, ಮೇ ತಿಂಗಳು, ರಮೇಶ ಜಾರಕಿಹೊಳಿ ಅವರ ಜನ್ಮದಿನ ಇದ್ದರೂ ಕೂಡಾ, ಬೆಳಿಗ್ಗೆಯಿಂದಲೆ ತಮ್ಮ ಕ್ಷೇತ್ರದ ಮತದಾರರೇ ತಮ್ಮ ದೇವರೆಂದು ಪ್ರಚಾರದ ನಿಮಿತ್ತ ಮತದಾರರನ್ನು ಬೇಟಿ ಮಾಡಿದರು.

ದಾಸನಟ್ಟಿ, ಕುಂದರನಾಡು, ಊರಬನಟ್ಟಿ, ಅಂಕಲಗಿ ಸೇರಿದಂತೆ ಹಲವಾರು ಗ್ರಾಮ ಹಾಗೂ ಪಟ್ಟಣದಲ್ಲಿ ಪ್ರಚಾರ ಕಾರ್ಯದಲ್ಲಿ ತೊಡಗಿ, ಬಿಜೆಪಿ ಪಕ್ಷಕ್ಕೆ ಹಾಗೂ ತಾವು ಮಾಡಿದ ಅಭಿವೃದ್ದಿ ಕೆಲಸಗಳಿಗಾಗಿ ತಮಗೂ ಮತ ನೀಡಿ, ಬಿಜೆಪಿ ಪಕ್ಷವನ್ನು ಗೆಲ್ಲಿಸಿ ಎಂದು ಕೈಮುಗಿದು ಮತಯಾಚನೆ ಮಾಡಿದ ಸಾಹುಕಾರರನ್ನು ಕಂಡು, ಅಂಕಲಗಿಯ ಅಭಿಮಾನಿಗಳು ಸಾಹುಕಾರರಿಗೆ ಪ್ರೀತಿಯ ಜೈಕಾರ ಹಾಕಿದರು..

ಅಂಕಲಗಿ ಎಲ್ಲಾ ಹಿರಿಯರು, ಮಹಿಳೆಯರು, ಯುವಕ ಯುವತಿಯರು, ರಮೇಶ ಜಾರಕಿಹೊಳಿ ಅವರ ಬರುವಿಕೆಗೆ ಕಾದು ಪುಷ್ಪಮಳೆ ಹಾಗೂ ಆರತಿ ಮಾಡುವದರ ಮೂಲಕ ಪ್ರತಿ ಗಲ್ಲಿಗೂ ಸ್ವಾಗತ ಮಾಡಿಕೊಂಡರು,ಅಂಕಲಗಿ ಯುವಕರು, ಬಿಜೆಪಿ ಪಕ್ಷಕ್ಕೆ, ಸಾಹುಕಾರರಿಗೆ ಘೋಷಣೆ, ಜೈಕಾರ ಕೂಗುತ್ತಾ, ಡೊಳ್ಳು ಬಾರಿಸುತ್ತಾ, ಉರು ತುಂಬಾ ಸಾಹುಕಾರರನ್ನು ಬಣ್ಣಿಸುತ್ತ, ಸುರಕ್ಷಿತವಾಗಿ ಕರೆದುಕೊಂಡು ಹೋಗುವ ಮೂಲಕ ತಮ್ಮ ಅಭಿಮಾನ ಮೆರೆದರು.

ಪಟ್ಟಣದಲ್ಲಿ ಇರುವ ಎಲ್ಲಾ ದೇವಸ್ಥಾನಕ್ಕೆ ತೆರಳಿ, ದೇವರ ಆಶೀರ್ವಾದ ಪಡೆದದ್ದು ತುಂಬಾ ವಿಶೇಷವಾಗಿತ್ತು.

ಇನ್ನು ರಮೇಶ ಜಾರಕಿಹೊಳಿ ಅವರ ಕೆಲ ಅಭಿಮಾನಿಗಳು ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿದ್ದು, ನಮ್ಮ ಶಾಸಕರು ಸರ್ವ ಧರ್ಮ, ಜಾತಿ, ಕುಲ, ಭಾಷೆ ಎಲ್ಲರನ್ನೂ ಸಮಾನವಾಗಿ ಕಾಣುವಂಥ ನಾಯಕ, ಒಂದು ವೇಳೆ ಸ್ವಂತ ಕೂಲದವರಿಗೆ ಸ್ವಲ್ಪ ಕಮ್ಮಿ ಮಾಡಬಹುದು, ಆದರೆ ಬೇರೆಯವರಿಗೆ ಯಾವತ್ತೂ ಕೊಡುಗೈ ದಾನಿನೇ ಎಂದರು. ಅಭಿವೃದ್ದಿ ವಿಷಯದಲ್ಲಿ ತುಂಬಾ ಕೆಲಸ ಮಾಡಿದ್ದು, ಪ್ರತಿ ಗ್ರಾಮದಲ್ಲಿ ಕುಡಿಯುವ ನೀರು, ರಸ್ತೆ, ಬೀದಿದ್ವೀಪ, ಶಿಕ್ಷಣ ಆರೋಗ್ಯ ಹೀಗೆ ಎಲ್ಲಾ ಮೂಲಸೌಕರ್ಯಗಳ ವ್ಯವಸ್ಥೆ ಮಾಡಿದ್ದಾರೆ,, ಯಾರೇ ಯಾವುದೇ ಕೆಲಸ ತಗೆದುಕೊಂಡು ಬಂದರೂ ಅವರಿಗೆ ಸಹಾಯ ಮಾಡಿ ಕಳಿಸುವ ಕರುಣಾಮಯಿ ಗುಣವುಳ್ಳ ಮಹಾ ಮಾನವತಾವಾದಿ ಶಾಸಕರು ಎಂದರು.

ಜನರಲ್ಲಿ ಯಾವತ್ತೂ ಬೇದಭಾವ ಮಾಡುವ ಗುಣ ಅವರಲ್ಲಿಲ್ಲ, ಎಲ್ಲಾ ಸಮುದಾಯದ ಜನರು ನನ್ನವರೇ ಎನ್ನುವ ಸಹೋದರತೆಯ ಭಾವನೆ ಅವರಲ್ಲಿದೆ.. ಅದಕ್ಕಾಗಿಯೇ ಆ ದೇವರೂ ಕೂಡಾ ಅವರ ಜೊತೆ ಸದಾ ಇದ್ದಾನೆ ಅನಿಸುತ್ತೆ, ಅದೇ ಕಾರಣಕ್ಕೆ ಸತತ ಆರು ಸಲ ಆರಿಸಿ ಬಂದಿದ್ದು,, ಈ ಏಳನೇ ಸಲವೂ ಬಹುಮತದಿಂದ ಆರಿಸಿ ಬರುವರು ಎಂದರು.

# ಶೆಟ್ಟರ, ಸವದಿ ಬಿಜೆಪಿ ಬಿಟ್ಟಿದ್ದಕ್ಕೆ ಬಹಳ ದು:ಖವಾಗಿದೆ: ಪ್ರಭಾಕರ ಕೋರೆ



ಹುಕ್ಕೇರಿ : ಚಿಕ್ಕೋಡಿ–ಸದಲಗಾ ಮತಕ್ಷೇತ್ರದಲ್ಲಿ ಬಿಜೆಪಿಗೆ ಕಠಿಣ ಸವಾಲಿನ ಪರಿಸ್ಥಿತಿಯಿದ್ದು ತಮ್ಮ ಪಕ್ಷದ ಅಭ್ಯರ್ಥಿಯ ಫಲಿತಾಂಶ ಫಿಫ್ಟಿ–ಫಿಫ್ಟಿ ಇದೆ ಎನ್ನುವ ಮೂಲಕ ಬಿಜೆಪಿ ಹಿರಿಯ ಮುಖಂಡ, ರಾಜ್ಯಸಭೆ ಮಾಜಿ ಸದಸ್ಯ ಪ್ರಭಾಕರ ಕೋರೆ ಅವರು ಯುದ್ಧಕ್ಕೆ ಮೊದಲೇ ಶಸ್ತ್ರತ್ಯಾಗ ಮಾಡಿದಂತೆ ಮಾತನಾಡಿದರು.

ಪಟ್ಟಣದಲ್ಲಿ ರವಿವಾರ ಸಂಜೆ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯ ಬಳಿಕ ನಡೆದ ಸುದ್ಧಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿಕ್ಕೋಡಿ–ಸದಲಗಾ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ರಮೇಶ ಕತ್ತಿ ಗೆಲುವಿಗೆ ಸಾಕಷ್ಟು ಶ್ರಮಿಸಲಾಗುತ್ತಿದೆ ಎಂದರು.

ಚಿಕ್ಕೋಡಿ–ಸದಲಗಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಗಣೇಶ ಹುಕ್ಕೇರಿ ವಿರುದ್ಧ ಬಿಜೆಪಿ ಅಭ್ಯರ್ಥಿ ರಮೇಶ ಕತ್ತಿ ತೀವ್ರ ಪೈಪೋಟಿ ನಡೆಸಿದ್ದು ಕಠಿಣ ಸ್ಪರ್ಧೆಯ ವಾತಾವರಣವಿದೆ.

ಈ ಹಿಂದೆ ಗಣೇಶ ಹುಕ್ಕೇರಿ ವಿರುದ್ಧ ಜೊಲ್ಲೆ, ಕವಟಗಿಮಠ ಅವರನ್ನು ನಿಲ್ಲಿಸಿದ್ದರೂ ಜಯ ಕಂಡುಕೊಳ್ಳಲು ಸಾಧ್ಯವಾಗಿಲ್ಲ.

ಗಣೇಶ ತಂದೆ ಪ್ರಕಾಶ ಹುಕ್ಕೇರಿ ನಿರಂತರ 24 ಗಂಟೆಯ ರಾಜ–ಕಾರಣಿಯಾಗಿದ್ದು ಅವರದ್ದು ಚುನಾವಣೆ ನಡೆಸುವ ರೀತಿಯೇ ಬೇರೆಯದ್ದಾಗಿದೆ ಎಂದು ಕೋರೆ ಎದುರಾಳಿ ಪಕ್ಷವನ್ನು ಹೊಗಳುವ ಮೂಲಕ ಚುನಾವಣೆ ಮೊದಲೇ ಸೋಲು ಒಪ್ಪಿಕೊಂಡಂತೆ ಮಾತನಾಡಿದರು.

ರಾಜ್ಯದಲ್ಲಿ ಬಿಜೆಪಿ 130 ಸ್ಥಾನ ಪಡೆದು ಅಧಿಕಾರದ ಚುಕ್ಕಾಣಿ ಹಿಡಿಯಲಿದೆ. ಜಿಲ್ಲೆಯ 18 ರ ಪೈಕಿ 12 ಸ್ಥಾನಗಳಲ್ಲಿ ಬಿಜೆಪಿ ಜಯ ಗಳಿಸುವ ವಿಶ್ವಾಸವಿದೆ. ಹುಕ್ಕೇರಿ ಕ್ಷೇತ್ರದ ಅಭ್ಯರ್ಥಿ ನಿಖಿಲ್ ಕತ್ತಿ ಸೌಮ್ಯ, ಸರಳ ಸ್ವಭಾವದ ವ್ಯಕ್ತಿ.

ಉನ್ನತ ಶಿಕ್ಷಣ ಪಡೆದಿರುವ ನಿಖಿಲ್ ಜನರ ಜತೆ ಉತ್ತಮ ಸಂಬಂಧ ಹೊಂದಿದ್ದಾನೆ. ಅವರ ತಂದೆ ದಿ.ಉಮೇಶ ಕತ್ತಿ ಮಾಡಿರುವ ಅಭಿವೃದ್ಧಿ ಕೆಲಸಗಳನ್ನು ಪರಿಗಣಿಸಿ ಅಧಿಕ ಮತಗಳ ಅಂತರದಿಂದ ಆಯ್ಕೆ ಮಾಡಬೇಕು ಎಂದು ಮನವಿ ಮಾಡಿದರು.

ಮಾಜಿ ಸಿಎಂ ಜಗದೀಶ ಶೆಟ್ಟರ, ಮಾಜಿ ಡಿಸಿಎಂ ಲಕ್ಷ್ಮಣ ಸವದಿ ಬಿಜೆಪಿ ಬಿಟ್ಟಿದ್ದಕ್ಕೆ ಬಹಳ ದು:ಖವಾಗಿದೆ.

ಆದರೆ, ಈ ಬೆಳವಣಿಗೆಯಿಂದ ಬಿಜೆಪಿ ಮೇಲೆ ಯಾವುದೇ ದುಷ್ಪರಿಣಾಮ ಆಗುವುದಿಲ್ಲ ಎಂದು ಅವರು ಹೇಳಿದರು.

ಮುಖಂಡರಾದ ಅಪ್ಪಾಸಾಹೇಬ ಶಿರಕೋಳಿ, ಬಸವರಾಜ ಮಟಗಾರ, ರಾಜೇಂದ್ರ ಪಾಟೀಲ, ಎ.ಕೆ.ಪಾಟೀಲ, ಮಲ್ಲಣ್ಣ ಯಾದವಾಡ, ಸತ್ಯಪ್ಪಾ ನಾಯಿಕ, ಬಸವರಾಜ ಮರಡಿ, ಅಶೋಕ ಪಟ್ಟಣಶೆಟ್ಟಿ, ಗುರುರಾಜ ಕುಲಕರ್ಣಿ, ಸುರೇಶ ದೊಡ್ಡಲಿಂಗನವರ ಮತ್ತಿತರರು ಉಪಸ್ಥಿತರಿದ್ದರು.

# ಡಾ. ರವಿ ಪಾಟೀಲ್ ಪರ ಮತಯಾಚಿಸಿದ ಕಿಚ್ಚ ಸುದೀಪ್



ಬೆಳಗಾವಿ: ಉತ್ತರ ವಿಧಾನ ಸಭಾ ಮತಕ್ಷೇತ್ರದ ಅಭ್ಯರ್ಥಿ ಡಾ ರವಿ ಪಾಟೀಲ್ ಪರವಾಗಿ ಮತಯಾಚನೆಗಿಳಿದರು. ನಗರದ ಪ್ರಮುಖ ರಸ್ತೆಯಾದ ಶ್ರೀನಗರ ರೋಡ್ ನಿಂದ ಸಾಯಿ ಮಂದಿರದ ವರೆಗೆ ಅದ್ದೂ–ರಿಯಾಗಿ ಮೆರವಣಿಗೆ ನಡೆಯಿತು. ತಮ್ಮ ನೆಚ್ಚಿನ ನಟನನ್ನು ನೋಡಲು ಸಾವಿರಾರು ಅಭಿಮಾನಿಗಳು ಸೇರಿದ್ದರು.ದಾರಿ ಉದ್ದಕ್ಕೂ ಕಿಚ್ಚ ಕಿಚ್ಚ ಘೋಷಣೆಯಿಂದ ಪುಳಕಿತನಾದ ಕಿಚ್ಚ ಸುದೀಪ್ ಅಭಿಮಾಣಿಗಳತ್ತ ಕೈ ಬೀಸಿ ಮತ್ತಷ್ಟು ಹುರುಪು ತುಂಬಿದರು.

ಮಾಧ್ಯಮದವರೊಂದಿಗೆ ಮಾತನಾಡಿದ ಕಿಚ್ಚ ಉತ್ತರ ಕರ್ನಾಟಕ ನನ್ನ ನೆಚ್ಚಿನ ಸ್ಥಳ ನೀವು ಚಲನ ಚಿತ್ರ ಇಷ್ಟಪಡುವಹಾಗೆ ಇನ್ನಷ್ಟು ಚಿತ್ರಗನ್ನು ಮಾಡಲು ಪ್ರೇರಣೆ ಯಾಗುತ್ತದೆ ಎಂದರು.ಇನ್ನು ಬಿಜೆಪಿ ಅಭ್ಯರ್ಥಿ ಡಾ ರವಿ ಪಾಟೀಲ್ ಪರವಾಗಿ ಮಾತನಾಡಿ ರವಿ ಪಾಟೀಲ್ ಉತ್ತಮ ಅಭ್ಯರ್ಥಿ ಯಾಗಿದ್ದು ಡಾಕ್ಟರ್ ಹಾಗೂ ವಿದ್ಯಾವಂತರಾಗಿ ಹಲವಾರು ಸಮಾಜಮುಖಿ ಸೇವೆಗಳನ್ನು ಮಾಡಿದ್ದಾರೆ.

ಆದ್ದರಿಂದ ಸರಳ ಮತ್ತು ಸಂಪನ್ನರಾದ ರವಿ ಪಾಟೀಲ್ ಅವರನ್ನು ಈ ಬಾರಿ ಬೆಳಗಾವಿಯ ಉತ್ತರ ಮತಕ್ಷೇತ್ರದಿಂದ ಗೆಲ್ಲಿಸುವುದರ ಮೂಲಕ ಇನ್ನಷ್ಟು ಸೇವೆ ಮಾಡಲು ಅವಕಾಶ ಮಾಡಿ ಕೊಡಬೇಕು ಎಂದರು.ಮಾಜಿ ಶಾಸಕ ಅನಿಕ್ ಬೆನಕೆ ಪರವಾಗಿ ಮಾತನಾಡಿ ಈ ರವಿ ಪಾಟೀಲ್ ಅವರಿಗೆ ಅವಕಾಶ ಮಾಡಿಕೊಟ್ಟು ಮತ್ತು ಅವರ ಗೆಲುವಿಗೆ ಶ್ರಮಿಸುತ್ತಿರುವುದು ಅವರ ಬಹುದೊಡ್ಡ ಗುಣ ಎಂದು ಹೇಳಿದರು.ಪ್ರಚಾರದಲ್ಲಿ ಸಂಸದೆ ಮಂಗಳಾ ಅಂಗಡಿ,ಸಂಸದ ಈರಣ್ಣ ಕಡಾಡಿ,ಮಾಜಿ ಶಾಸಕ ಅನಿಕ್ ಬೆನಕೆ ಸೇರಿದಂತೆ ಹಲವರು ಪ್ರಚಾರಕ್ಕೆ ಸಾಥ್ ನೀಡಿದರು.ಬಿಜೆಪಿಯ ಕಾರ್ಯಕರ್ತರು ಹಾಗೂ ಕಿಚ್ಚನ ಅಭಿಮಾನಿಗಳು ಸೇರಿದ್ದರು.

# ವಿಶ್ವ ಕಾರ್ಮಿಕರ ದಿನಾಚರಣೆ



ಹುಕ್ಕೇರಿ : ಕಾರ್ಮಿಕರು ಮತದಾನದ ಹಕ್ಕು ಮತ್ತು ಕರ್ತವ್ಯದ ಅರಿವೂ ಮೂಡಿಸಿಕೊಂಡು ಮತದಾನದಲ್ಲಿ ಭಾಗವಹಿಸುವದು ಮುಖ್ಯ ಎಂದು ಹಿರಿಯ ಸಿವ್ಹಿಲ್ ನ್ಯಾಯಾಧೀಶ ಕೆ ಎಸ್ ರೋಟ್ಟೇರ ಹೇಳಿದರು.

ಅವರು ಸ್ಥಳೀಯ ವಕೀಲರ ಸಭಾ ಭವನದಲ್ಲಿ ಹಮ್ಮಿಕೊಂಡ ವಿಶ್ವ ಕಾರ್ಮಿಕರು ದಿನಾಚರಣೆಯ ಕಾರ್ಯಕ್ರಮಕ್ಕೆ ಸಸಿಗೆ ನೀರು ಹಾಕುವುದರ ಮೂಲಕ ಚಾಲನೆ ನೀಡಿದರು. ಹೆಚ್ಚಿನ ಮತ ನೀಡುವದರ ಮೂಲಕ ಸುಭದ್ರ ಹಾಗೂ ಜನರ ಕಷ್ಟ ಆಲಿಸುವ ವ್ಯಕ್ತಿಗೆ ಹೆಚ್ಚಿನ ಮತ ನೀಡಿದರು.

ಸರಕಾರ ಕಾರ್ಮಿಕರ ಶ್ರೇಯೋಭಿವೃದ್ದಿಗೆ ಹಲವಾರು ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದು .ಶಿಕ್ಷಣ,ಉದ್ಯೋಗ ಮೂಲಕ ಆರ್ಥಿಕವಾಗಿ ಸದುಪಯೋಗ ಪಡೆದುಕೊಂಡು ತಮ್ಮ ಆರ್ಥಿಕದೊಂದಿಗೆ ತಮ್ಮ ಮಕ್ಕಳ ಭವಿಷ್ಯ ರೂಪಿಸಿಕೋಳ್ಳಬೇಕು.

ವಕೀಲರ ಸಂಘದ ಅಧ್ಯಕ್ಷ ಆರ್.ಪ ಚೌಗಲಾ, ಕಾರ್ಮಿಕ–ರಿಲ್ಲದ ಪ್ರಪಂಚವಿಲ್ಲ ಕಾರ್ಮಿಕ–ರಿಲ್ಲದೆ ಯಾವದೇ ಕಾಮಗಾ–ರಿಗಳು ನಡೆಯುವದಿಲ್ಲಾ. ನಾವು ನಿರ್ಮಿಸುವ ಮನೆ, ಫ್ಯಾಕ್ಟರಿ, ಅಂಗಡಿ,ಅಪಾರ್ಟ್‌ಮೆಂಟ್ , ಪಟ್ಟಣ ಅಭಿವೃದ್ಧಿಗೆ ಕಾರ್ಮಿಕರ ಶ್ರಮ ಅಮೂಲ್ಯ . ಮೇ 1 ರಂದು ಕಾರ್ಮಿಕ ದಿನಾಚಾರಣೆ ಆಚರಿಸುವ ಮೂಲಕ ಕಾರ್ಮಿಕರ ಹಕ್ಕುಗಳ ಮತ್ತು ಕರ್ತವ್ಯಗಳನ್ನು ಗೌರವಿಸಲಾಗುತ್ತಿದೆ.

# ಶಾಸಕ ಸತೀಶ ಜಾರಕಿಹೊಳಿ ಬಹುಮತ ಅಂತರದಿಂದ ಗೆಲ್ಲಿಸಿ: ರಾಹುಲ್ ಜಾರಕಿಹೊಳಿ ಮನವಿ



ಬೆಳಗಾವಿ: ತಾಲೂಕಿನ ಕಾಕತಿ ಗ್ರಾಮದ ಲಕ್ಷ್ಮೀ ನಗರ ಸೇ–ರಿದಂತೆ ವಿವಿಧ ವಾರ್ಡ್‌ಗಳಲ್ಲಿ ಯುವ ನಾಯಕ ರಾಹುಲ್ ಜಾರಕಿಹೊಳಿ ಭರ್ಜರಿ ರೋಡ ಶೋ ನಡೆಸಿದರು.

ತಂದೆಯವರಾದ ಸತೀಶ ಜಾರಕಿಹೊಳಿ ಅವರು ಹೆಚ್ಚಿನ ಬಹುಮತ ಅಂತರದಿಂದ ಗೆಲ್ಲಿಸಬೇಕು ಎಂದು ಮತದಾರರತ್ತ ಕೈ ಬೀಸಿ ಮತಬೇಟೆ ನಡೆಸಿದರು.

ಈ ವೇಳೆ ಯುವ ನಾಯಕ ರಾಹುಲ್ ಜಾರಕಿಹೊಳಿ ಮಾತನಾಡಿ, ದಿನ , ದಲಿತರ ರೈತರ ಬಡವರ ಪರ ಇರುವ ಕಾಂಗ್ರೆಸ್ ಪಕ್ಷ. ಸಮಾಜದ ಎಲ್ಲಾ ಸಮುದಾಯದ ಜನರನ್ನು ಒಂದೇ ವೇದಿಕೆ ಮೇಲೆ ಕರೆದುಕೊಂಡು ಹೋಗುವ " ಕೈ " ಗೆ ಮತದಾರರು ಶಕ್ತಿ ತುಂಬಬೇಕು ಎಂದರು.

ರಾಜ್ಯದಲ್ಲಿ ಸದ್ಯ ಕಾಂಗ್ರೆಸ್ ಅಲೆ ಇದೆ, ಯಮಕನಮರಡಿ ಕ್ಷೇತ್ರದಲ್ಲಿ ಶಾಸಕರಾದ ಸತೀಶ ಜಾರಕಿಹೊಳಿ ಅವರು 15 ವರ್ಷಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಇನ್ನು ಹೆಚ್ಚಿನ ಅಭಿವೃದ್ಧಿಗಾಗಿ ಮತದಾರರು ಆಶೀರ್ವಾದ ಮಾಡಬೇಕು. ಶಾಸಕ ಸತೀಶ ಜಾರಕಿಹೊಳಿ ಅವರು ಬಹುಮತ ಅಂತರದಿಂದ ಗೆಲ್ಲಿಸಿ ಮುಂದಿನ ಅಭಿವೃದ್ಧಿ ಪರ್ವಕ್ಕೆ ನಾಂದಿ ಹಾಡಬೇಕು.

ಬಿಜೆಪಿ ಆಡಳಿತ ಅವಧಿಯಲ್ಲಿ ದಿನಸಿ ಬೆಲೆ ಗಗಕೇರಿವೆ , ಇದು ಜನಸಾಮಾನ್ಯರಿಗೆ ಹೊರೆಯಾಗಿದೆ. ಹೀಗಾಗಿ ಮತದಾರರು ಬಿಜೆಪಿ ಸರ್ಕಾರ ಕಿತ್ತೆಸೆಯಬೇಕು ಎಂದು ಮತದಾರರಲ್ಲಿ ಮನವಿ ಮಾಡಿಕೊಂಡು. ತಂದೆಯವರನ್ನು ಗೆಲ್ಲಿಸುವ ಮೂಲಕ ಕಾಂಗ್ರೆಸ್ ಪಕ್ಷಕ್ಕೆ ಶಕ್ತಿಯನ್ನ ತುಂಬಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಿದ್ದು ಸುಣಗಾರ, ಸಿದ್ಧಿಕ್ ಅಂಕಲಗಿ, ಅಶೋಕ ಬನಮಣಿ, ಸೇರಿಂದತೆ ಮಹಿಳಾ ಹಾಗೂ ಇತರರು ಇದ್ದರು.

# ಕಾಗವಾಡದಲ್ಲಿ ಕೈ–ಕಮಲದ ನಡುವೆ ತೀವ್ರ ಪೈಪೋಟಿ



ಬೆಳಗಾವಿ: ಒಂದೆಡೆ ಕೃಷ್ಣೆಯಿಂದ ನದಿ ತೀರದ ಬಹುಪಾಲು ಪ್ರದೇಶಗಳು ಸವಳು ಜವಳು ಸಮಸ್ಯೆ ಎದು–ರಿಸುತ್ತಿದ್ದರೆ, ಇನ್ನೊಂದೆಡೆ ಯಾವಾಗಲೂ ಬರಗಾಲವನ್ನೇ ಎದುರಿಸುತ್ತ ಬಂದಿದ್ದ ಕಾಗವಾಡ ಕ್ಷೇತ್ರದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಮತದಾರರನ್ನು ಸೆಳೆಯಲು ರಣತಂತ್ರ ರೂಪಿಸುತ್ತಿದ್ದಾರೆ.

ಒಂದೆಡೆ, ಕಾಗವಾಡ ಮತಕ್ಷೇತ್ರದ ಸುಮಾರು 50 ಕಿ.ಮೀ ಉದ್ದಕ್ಕೂ ಕೃಷ್ಣೆ ಹರಿದಿದ್ದರೆ, ಇನ್ನೊಂದೆಡೆ ಶಾಶ್ವತವಾಗಿ ಬರಗಾಲ ಪರಿಸ್ಥಿತಿಯನ್ನೇ ಎದುರಿಸುತ್ತ ಬರಬೇಕಾದಂತಹ ದುರ್ಭರ ಸ್ಥಿತಿ ಇಲ್ಲಿದೆ. ಕಳೆದ ಬಾರಿ ಕೈ ಪಡೆ ಬಿಟ್ಟು ಬಿಜೆಪಿ ಸೇರಿದ್ದ ಶ್ರೀಮಂತ ಪಾಟೀಲ್ ಅವರು ಕಾಂಗ್ರೆಸ್ ಹಾಲಿ ಅಭ್ಯರ್ಥಿ ರಾಜು ಕಾಗೆ ವಿರುದ್ಧ ಗೆದ್ದಿದ್ದರು.

ಆದರೆ ಈ ಬಾರಿಯ ಚುನಾವಣೆಯಲ್ಲಿ ಕಾಗವಾಡ ಕ್ಷೇತ್ರದಲ್ಲಿ ಸವದಿ ಪ್ರಚಾರ ಹಾಗೂ ಲಿಂಗಾಯತ ಮತಗಳ ಕ್ರೋಢಿಕರಣದಿಂದಾಗಿ ಗೆಲ್ಲುವ ನಿರೀಕ್ಷೆಯಲ್ಲಿ ಕಾಂಗ್ರೆಸ್ ಪಕ್ಷ ಇದೆ. ಇನ್ನೂ ಮರಾಠ ಸಮುದಾಯದ ಶ್ರೀಮಂತ ಪಾಟೀಲ್ ಅವರಿಗೆ ಅಭಿವೃದ್ಧಿ ಕಾರ್ಯಗಳು ಶ್ರೀರಕ್ಷೆಯಾಗಿದೆ.

ಇನ್ನೂ ಕಾಗವಾಡ ಮತಕ್ಷೇತ್ರದಲ್ಲಿ ಇದುವರೆಗೆ ಸಪ್ಪೆಯಾಗಿದ್ದ ಕಾಂಗ್ರೆಸ್ ಪಕ್ಷ ಸವದಿ ಪಕ್ಷ ಸೇರುತ್ತಿದ್ದಂತೆ ಫೀನಿಕ್ಸ್ ಪಕ್ಷಿಯಂತೆ ಎದ್ದಿದೆ.

ಕ್ಷೇತ್ರದ ಮತದಾರರ ವಿವರ: ಕಾಗವಾಡ ವಿಧಾನಸಭಾ ಕ್ಷೇತ್ರದ ಒಟ್ಟು 1,91,050 ಮತದಾರರಿದ್ದಾರೆ.

ಅದರಲ್ಲಿ 97,707 ಪುರುಷರು ಹಾಗೂ 93,343 ಮಹಿಳೆಯರಿದ್ದಾರೆ. ಲಿಂಗಾಯತರು: 60,000, ಬ್ರಾಹ್ಮಣರು: 7,000, ಎಸ್ಸಿ, ಎಸ್ಟಿ: 35,000, ಮುಸ್ಲಿಂ: 15,000, ಮರಾಠ: 35,000, ಉಪ್ಪಾರ: 4,500, ಜೈನ್: 30,000 ಮತದಾ–ರಿದ್ದಾರೆ.

ಕ್ಷೇತ್ರ ಹಿನ್ನೋಟ: 1962 ಶಂಕರಗೌಡ ವೀರನಗೌಡ ಪಾಟೀಲ್–ಕಾಂಗ್ರೆಸ, 1967 ಬಿ. ಸಿ. ಪಿ ರಾಜೀ–ಕಾಂಗ್ರೆಸ್, 1972 ಕಿತ್ತೂರು ರಘುನಾಥ್ ಧುಲಪ್ಪ–ಕಾಂಗ್ರೆಸ್, 2008 ಭರಮಗೌಡ ಅಲಗೌಡ ಕಾಗೆ–ಬಿಜೆಪಿ, 2013 ಭರಮಗೌಡ ಅಲಗೌಡ ಕಾಗೆ–ಬಿಜೆಪಿ, 2018 ಶ್ರೀಮಂತ್ ಬಾಳಾಸಾಹೇಬ್ ಪಾಟೀಲ–ಕಾಂಗ್ರೆಸ್, 2019 ಶ್ರೀಮಂತ ಪಾಟೀಲ ಬಿಜೆಪಿಯಿಂದ ಗೆದಿದ್ದಾರೆ.

ಬಿಜೆಪಿಯ ರಾಜು ಕಾಗೆ, ತಮ್ಮ ಅಧಿಕಾರಾವಧಿಯಲ್ಲಿ ಕೈಗೊಂಡ ಅಭಿವೃದ್ಧಿಪರ ಕಾಮಗಾರಿಗಳೇ ತಮಗೆ ಶ್ರೀರಕ್ಷೆಯಾಗಲಿವೆ ಎಂಬು ನಂಬಿಕೊಂಡಿದ್ದು, ಕುಡಿಯುವ ನೀರಿನ ಸಮಸ್ಯೆ, ರಸ್ತೆ, ಕಾಲುವೆ ಸೇರಿದಂತೆ ಹಲವು ಮೂಲ ಸೌಲಭ್ಯ ಗಳನ್ನು ಒದಗಿಸಿದ್ದು, ಇದರಿಂದಾಗಿ ಕಳೆದ ಬಾರಿಗಿಂತ ಈ ಬಾರಿ ತಮಗೆ ಹೆಚ್ಚು ಮತ ಬರಲಿವೆ ಎಂದು ನಂಬಿದ್ದಾರೆ.

ಅದೇ ರೀತಿ ಶ್ರೀಮಂತ ಪಾಟೀಲ, ಸರಕಾರದ ಯಾವುದೇ ರೀತಿಯ ಸಹಾಯ, ಸಹಕಾರ ಪಡೆಯದೇ, ಮೂಲಸೌಲಭ್ಯಗಳಿಂದ ವಂಚಿತವಾದ ಗ್ರಾಮಗಳಿಗೆ ಕಾರ್ಖಾನೆ ವತಿಯಿಂದ ಸುಮಾರು 15 ಕಿ.ಮೀ ಅಂತರದಿಂದ ಪೈಪ್‌ಲೈನ್ ಹಾಕಿಸಿ ಸಾವಿರಾರು ಎಕರೆ ಭೂ ಪ್ರದೇಶವನ್ನು ನೀರಾವ–ರಿಗೊಳಿಸಿದ್ದಲ್ಲದೆ.

ಕಾರ್ಖಾನೆ ವತಿಯಿಂದ ಟ್ಯಾಂಕರ್ ಮೂಲಕ ಕುಡಿಯುವ ನೀರಿನ ಪೂರೈಸಿ ಈಗಾಗಲೇ ಜನರ ಮನವನ್ನು ಗೆದ್ದಿದ್ದು, ಅದು ಚುನಾವಣೆಯಲ್ಲಿ ತಮ್ಮ ನೆರವಿಗೆ ಬರಲಿದೆ ಎಂಬುದು ಅವರ ನಂಬಿಕೆಯಾಗಿದೆ.

ಇನ್ನು ಕಾಂಗ್ರೆಸ್ ಮುಖಂಡರು ಹೇಳಿಕೊಳ್ಳುವಂತೆ, ಬಿಜೆಪಿ ದುರಾಡಳಿತದಿಂದ ಬೇಸತ್ತ ರಾಜ್ಯದ ಜನತೆ ಕಾಂಗ್ರೆಸ್‌ಗೆ ಮತ ಚಲಾಯಿಸಲಿದ್ದಾರೆಂಬುದು ಅವರ ನಂಬಿಕೆಯಾಗಿದೆ.

# ಧ್ರುವನಕ್ಷತ್ರ ಚಲನಚಿತ್ರಕ್ಕೆ ಮುಹೂರ್ತ



ಹುಬ್ಬಳ್ಳಿ : ಬೆಂಗಳೂರಿನ ಲಕ್ಕಿ ಫಿಲಮ್ಸ್ ವತಿಯಿಂದ ಆರ್ ಸಂಪತ್ ನಿರ್ಮಿಸುತ್ತಿರುವ 'ಧ್ರುವ ನಕ್ಷತ್ರ' ಕನ್ನಡ ಚಲನಚಿತ್ರದ ಮುಹೂರ್ತ ಸಮಾರಂಭ ನಗರದ ಸಿದ್ದಾರೂಢಮಠದಲ್ಲಿ ನೆರವೇರಿತು.

ಹಿರಿಯ ಪತ್ರಕರ್ತ ಗಣಪತಿ ಗಂಗೊಳ್ಳಿ ಅವರು ಕ್ಲಾಪ್ ಮಾಡುವ ಮೂಲಕ ಮೊದಲ ದೃಶ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಬೆಂಗಳೂರಿನಿಂದ ಇಲ್ಲಿ ಬಂದು ಇಲ್ಲಿಯೇ ಚಿತ್ರೀಕ–ರಿಸುತ್ತಿರುವುದು ಸಂತಸದ ಸಂಗತಿ. ಇದರಲ್ಲಿ ಹಾಸ್ಯ ಕಲಾವಿದರಾದ ವೈಜನಾಥ ಬಿರಾದಾರ ಪ್ರಮುಖ ಪಾತ್ರ ಮಾಡುತ್ತಿರುವುದರಿಂದ ಇದು ರಾಜ್ಯದಲ್ಲಿ ಯಶಸ್ವಿ ಪ್ರದರ್ಶನ ಕಾಣಲಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಹಿರಿಯ ಚಲನಚಿತ್ರ ಕಲಾವಿದರಾದ ಡಾ. ಗೋವಿಂದ ಮಣ್ಣೂರ ಅವರು ಕ್ಯಾಮರಾ ಗುಂಡಿ ಒತ್ತುವ ಮೂಲಕ ಚಿತ್ರೀಕರಣಕ್ಕೆ ಚಾಲನೆ ಮಾಡಿ ತಂಡಕ್ಕೆ ಶುಭ ಕೋರಿದರು. ಅತಿಥಿಗಳಾಗಿ ಉತ್ತರ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಶಂಕರ ಸುಗತೆ, ನಿರ್ದೇಶಕ ಗುರುರಾಜ ಕಾಟೆ, ಹಿರಿಯ ಪತ್ರಕರ್ತ ಅಕ್ಬರ್ ಬೆಳಗಾಂವಕರ, ಚಲನಚಿತ್ರ ಪಿ.ಆರ್.ಓ ಡಾ. ಪ್ರಭು ಗಂಜಿಹಾಳ, ಡಾ.ವೀರೇಶ್ ಹಂಡಿಗಿ, ನಿರ್ಮಾಪಕ, ನಟ ರೇಣುಕುಮಾರ ಸಂಸ್ಥಾನಮಠ, ಶೋಭಾ ಸಂಸ್ಥಾನಮಠ ಆಗಮಿಸಿದ್ದರು.

ಹಿರಿಯ ಕಲಾವಿದ ವೈಜನಾಥ ಬಿರಾದಾರ ಮಾತನಾಡಿ, ಗಂಡು ಮೆಟ್ಟಿನ ನಾಡು ಹುಬ್ಬಳ್ಳಿಯಲ್ಲಿ ಈ ಸಿನಿಮಾ ಚಿತ್ರೀಕರಣ ನಡೆಯುತ್ತಿರುವುದು ಸಂತಸದ ಸಂಗತಿ. ಇಲ್ಲಿನವರ ಪ್ರೀತಿಗೆ ನಾನು ಆಭಾರಿ. ಕುಡುಕರ ಜೀವನ ಹೇಗಿರುತ್ತದೆ? ಅವರ ಕುಟುಂಬ ಹೇಗಿರುತ್ತದೆ ಎಂಬುದನ್ನು ಈ ಚಿತ್ರದಲ್ಲಿ ಹೇಳಲಾಗಿದೆ.

ಇದು ಎಲ್ಲರ ಮನಗೆಲ್ಲುವಲ್ಲಿ ಸಹಕಾರಿಯಾಗಲಿದೆ ಎಂದು ಹೇಳಿದರು. ಹಿರಿಯ ಚಿತ್ರರಂಗ, ಕಿರುತೆರೆಯ ಕಲಾವಿದೆ ಸುನಂದಾ ಕಲಬುರ್ಗಿ ಮಾತನಾಡಿ, ಚಿತ್ರೀಕರಣಕ್ಕೆ ಹುಬ್ಬಳ್ಳಿಯ ಪರಿಸರ ಉತ್ತಮವಾಗಿದೆ. ಈ ಸಿನಿಮಾದಲ್ಲಿ ನನಗೆ ಅವಕಾಶ ಸಿಕ್ಕಿದ್ದು ಸಂತಸ ತಂದಿದೆ ಎಂದರು.

ಚಿತ್ರದಲ್ಲಿ ವೈಜನಾಥ ಬಿರಾದಾರ, ಸುನಂದಾ ಕಲಬುರ್ಗಿ, ಖಳನಾಯಕನಾಗಿ ಪತ್ರಕರ್ತ ಪ್ರಕಾಶ. ಬಿ, ರಾಜಶೇಖರ ಪಾಟೀಲ, ಜೆ.ಇ,ರಾಜು ವಿಜಾಪೂರ, ತುಳಸಿ ರಾಠೋಠ, ಶಿವಾನಂದ,ಕೆ, ಮಾ.ಪ್ರಣವ್, ಲಕ್ಷ್ಮಿ ಯಾದವ, ಮಹೇಂದ್ರಕುಮಾರ, ವೀರಣ್ಣ ವಿಠಲಾಪುರ ,ಜಾಯ್ ಗ್ಯಾಬ್ರಿಯಲ್ ಡೊಕ್ಕಾ, ಷಣ್ಮುಖ ರಾಮ್, ಪ್ರಭು ಪ್ರಕಿನ, ರಿಕಿ ಎಂ ಜಾಯ್, ಮೊಸೆಸ್ ಕೊಡಾಸಿ, ಮೊದಲಾದವ–ರಿದ್ದಾರೆ. ಛಾಯಾಗ್ರಹಣ ಜೆ.ಇ. ಶಂಕರ್, ಸಂಕಲನ ಸಂಜೀವರೆಡ್ಡಿ, ಪ್ರಸಾಧನ ಅಭಿನಂದನ, ಪತ್ರಿಕಾ ಸಂಪರ್ಕ ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಗಿ, ಕತೆ , ಚಿತ್ರಕತೆ ಜೊತೆಗೆ ನಿರ್ದೇಶನವನ್ನು ಶಿವಾಜಿರಾವ್ ಮಾಡುತ್ತಿದ್ದಾರೆ .ಆರ್.ಸಂಪತ್ ನಿರ್ಮಾಪಕರಾಗಿದ್ದಾರೆ.

# ಕನಿಷ್ಠ ಅವಧಿಯಲ್ಲಿ ಲಿಂಗಾಯತ ಸಂಸ್ಕೃತಿ ಪುನರುತ್ಥಾನ ಶ್ಲಾಘನೀಯ




ಬೆಳಗಾವಿ: ಎಲ್ಲ ರೀತಿಯಲ್ಲೂ ಅರ್ಹವಾದ ಲಿಂಗಾಯತವನ್ನು ಸ್ವತಂತ್ರ ಧರ್ಮದ ಸ್ಥಾನಮಾನ ನೀಡುವ ಇಚ್ಛಾಶಕ್ತಿ ಯಾವರಾಜಕೀಯ ಪಕ್ಷಗಳಲ್ಲೂ ಇಲ್ಲ. ಇಂಥ ಪಕ್ಷಗಳನ್ನು ಯಾರೂ ಬೆಂಬಲಿಸ ಕೂಡದು ಎಂದು ವಿಶ್ರಾಂತ ಐಎಎಸ್ ಅಧಿಕಾರಿ, ಜಾಗತಿಕ ಲಿಂಗಾಯತ ಮಹಾ ಸಭಾರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಾ. ಶಿವಾನಂದ ಜಾಮದಾರ್ ಹೇಳಿದರು.

ಅವರು ಜಾಗತಿಕ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಬಸವ ಸೇನೆ ಬೆಳಗಾವಿ ಜಿಲ್ಲಾಘಟಕದ ಸಹಯೋಗದಲ್ಲಿ ಇಲ್ಲಿನ ಶಿವಬಸವನಗರದ ಪ್ರಭುದೇವ ಸಭಾಗ್ರಹದ ಸಭಾಂಗಣದಲ್ಲಿ ಬಸವ ಜಯಂತಿ ನಿಮಿತ್ತ ಆಯೋಜಿಸಿದ್ದ ಜಿಲ್ಲಾ ಮಟ್ಟದ ವಚನ ನೃತ್ಯೋತ್ಸವ ಸ್ಪರ್ಧೆ ಹಾಗೂ ಬಸವ ಸಮಾವೇಶದಲ್ಲಿ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಿ ಅವರು ಮಾತನಾಡಿದರು.

"ಮುಸ್ಲಿಂ, ಕ್ರೈಸ್ತ, ಸನಾತನ ವೈದಿಕ ಧರ್ಮಗಳ ಜನರಿಗೆ ಅವರದೇ ಆದ ಸಾಹಿತ್ಯ, ಸಂಗೀತ ಸಂಸ್ಕೃತಿಗಳಿವೆ. ಲಿಂಗಾಯತರಿಗೂ ಇರಬೇಕು. ಈ ಮೊದಲು ವಚನ ಸಾಹಿತ್ಯವೆಂಬುದು ಕೆಲವು ಲಿಂಗಾಯತರ ಮನೆಗಳ ಜಗುಲಿಗಳ ಮೇಲೆ, ಕೆಲ ಮಠಗಳಲ್ಲಿ ಕಟ್ಟುಗಳ ರೂಪದಲ್ಲಿ ಜೋಪಾನ ಮಾಡಿಡಲಾಗಿ–ತ್ತು. ಅವುಗಳನ್ನು ಓದುವ ಸಾಮರ್ಥ್ಯ ಇರುವವರ ಸಂಖ್ಯೆ ಅತ್ಯಂತ ಕಡಿಮೆಯಿತ್ತು. ಸ್ವಾತಂತ್ರ್ಯಾ ನಂತರ ನಿಧಾನವಾಗಿ ಅಕ್ಷರಸ್ಥರ ಸಂಖ್ಯೆ ಹೆಚ್ಚುತ್ತಿದ್ದಂತೆ ಸಂಶೋಧನೆಗಳೂ ಹೆಚ್ಚಿ ಅತ್ಯಂತ ಕನಿಷ್ಠ ಅವಧಿಯಲ್ಲಿ ಅವುಗಳಿಗೆ ಬೆಳಕು ನೀಡುವ ಮೂಲಕ ಲಿಂಗಾಯತ ಸಂಸ್ಕೃತಿಯನ್ನು ಪುನರುತ್ಥಾನಗೊಳಿಸಿರುವುದು ಶ್ಲಾಘನೀಯ ಕಾರ್ಯ" ಎಂದರು.

ಇದಕ್ಕೆಕಾರಣೀ ಭೂತರಾದ ಡಾ.ಫ. ಗು. ಹಳಕಟ್ಟಿ, ಸಿ.ಸಿ.ಬಸವನಾಳ, ಆರ್.ಸಿ. ಹಿರೇಮಠ, ಡಾ.ಎಂ.ಎಂ. ಕಲಬುರಗಿ ಮತ್ತಿತರ ಮಹನೀಯರು ಹಾಗೂ ವಚನ ಸಾಹಿತ್ಯಕ್ಕೆ ಸ್ವರ ಸಂಯೋಜಿಸಿ ವಚನ ಸಂಗೀತಕ್ಕೆ ಶಾಸ್ತ್ರೀಯ ರೂಪಕೊಟ್ಟ ಬಸವರಾಜ ಜಂಬಲಗಿ, ಬಸವರಾಜರಾಜ ಗುರು, ಮಲ್ಲಿಕಾರ್ಜುನ ಮನ್ಸೂರ್ ಮೊದಲಾದವರನ್ನು ಡಾ. ಜಾಮದಾರ್ ಈ ಸಂದರ್ಭದಲ್ಲಿ ಸ್ಮರಿಸಿದರು.

"ಇವೆಲ್ಲದರ ಫಲವಾಗಿ ಇಂದು ವಚನ ನೃತ್ಯೋತ್ಸವದಂಥ ಸ್ಪರ್ಧೆಗಳು ಆಯೋಜನೆ ಗೊಳ್ಳುತ್ತಿರುವುದು ಆಶಾದಾಯಕ ಬೆಳವಣಿಗೆ" ಎಂದುಅವರು ಹೇಳಿದರು.

ಶೇಗುಣಸಿ ವಿರಕ್ತ ಮಠದ ಶ್ರೀ ಮಹಾಂತ ಮಹಾಸ್ವಾಮಿಗಳು ಸಮ್ಮುಖ ವಹಿಸಿ ಮಾತನಾಡಿ, "ಭಾರತದ ಅಮೂಲಾಗ್ರ ಇತಿಹಾಸವನ್ನು ಅವಲೋಕಿಸಿದಾಗ ದೇಶದ ಪ್ರಪ್ರಥಮ ಸ್ವಾತಂತ್ರ್ಯ ಪ್ರತಿಪಾದಕರು ಖ್ಯಾತ ಚಿಂತಕ ಅಥ–ರ್ಟರ್ ಮೈಲ್‌ಅವರೇ ಈ ಮಾತನ್ನು ಹೇಳಿದ್ದಾರೆ ಎಂದರೆ ಬಸವಣ್ಣನವರ ಅದ್ಭುತ ಕಾಯಕದ ಮಹತ್ವ ತಿಳಿಯುತ್ತದೆ. ಇಂದು ಸಮಾಜದಲ್ಲಿ ಎಲ್ಲೆಡೆ ಅನಾಚಾರ ತಾಂಡವಾಡುತ್ತಿರುವ, ಜಾತೀಯತೆಯ ಪೆಡಂಭೂತರು ದ್ರತಾಂಡವ ಮಾಡುತ್ತಿರುವ ಈ ಸಂದರ್ಭದಲ್ಲಿ ಲಿಂಗಾಯತ ಸಂಸ್ಕೃತಿ ಉಳಿಸಿ ಬೆಳೆಸುವ ಅನಿವಾರ್ಯ ಪ್ರಸಂಗ ಇದ್ದು ಇಡೀ ಜಗತ್ತಿಗೆ ಬಸವ ತತ್ವವನ್ನು ತಲುಪಿಸುವ ಕೆಲಸ ಆಗಬೇಕಿದೆ" ಎಂದರು.

ಇಂಗ್ಲೆಂಡ್ ನಲ್ಲಿ ಬುದ್ಧನ ನಂತರ ನಮ್ಮೆಲ್ಲರ ಆರಾಧ್ಯಗುರು ಬಸವಣ್ಣನವರ ಪ್ರತಿಮೆ ಸ್ಥಾಪನೆ ಮಾಡಿದ್ದಾರೆ ಎಂದರೆ ನಾವು ಬಸವ ಸಂಸ್ಕೃತಿಯನ್ನು ಎಲ್ಲರಿಗೂ ಪರಿಚಯಿಸುವ ಅಗತ್ಯವಿದೆ" ಎಂದರು.

ನಾಗನೂರು ಮಠದ ಶ್ರೀ ಅಲ್ಲಮಪ್ರಭು ಮಹಾಸ್ವಾಮಿಗಳು ಅನುಭಾವದ ನುಡಿಗಳನ್ನಾಡಿ, ಒಂಬತ್ತು ಶತಮಾನಗಳ ಹಿಂದೆಯೇ ಒಂದು ರಾಜ್ಯವನ್ನು ಹೇಗೆ ನಿಭಾಯಿಸ ಬೇಕೆಂಬ ಪರಿಕಲ್ಪನೆ ಕೊಟ್ಟವರು ಬಸವಣ್ಣನವರು. ಆದ–'ರೆಇಂದು ಹಣ ಇಲ್ಲದಿದ್ದರೆ ರಾಜ–ಕೀಯವನ್ನೇ ಮಾಡಲಾಗದು ಎಂಬ ಪರಿಸ್ಥಿತಿ ಉದ್ಭವಿಸಿರುವುದು ದುರಂತ" ಎಂದು ವಿಷಾದಿಸಿದರು.

ಕಾರಂಜಿ ಮಠದ ಶ್ರೀ ಗುರುಸಿದ್ಧ ಮಹಾಸ್ವಾಮಿಗಳು, ನಾಗನೂರು ರುದ್ರಾಕ್ಷಿ ಮಠದ ಶ್ರೀ ಅಲ್ಲಮಪ್ರಭು ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು. ನ್ಯಾಯವಾದಿ, ಜಾಗತಿಕ ಲಿಂಗಾಯತ ಮಹಾಸಭಾ ಅಧ್ಯಕ್ಷ ಬಸವರಾಜರೊಟ್ಟಿ ಅಧ್ಯಕ್ಷತೆ ವಹಿಸಿದ್ದರು.

ರಾಷ್ಟ್ರೀಯ ಬಸವ ಸೇನೆ ಅಧ್ಯಕ್ಷ ಶಂಕರಗುಡಸ, ಜಾಗತಿಕ ಲಿಂಗಾಯತ ಮಹಾಸಭಾ ಬೆಳಗಾವಿ ಜಿಲ್ಲಾ ಮಹಿಳಾ ಘಟಕಾಧ್ಯಕ್ಷೆ ಪ್ರೇಮಾಅಂಗಡಿ ವೇದಿಕೆಯಲ್ಲಿದ್ದರು.

ನಯನಾಗಿರಿಗೌಡರ್ ತಂಡದವರು ಪ್ರಾರ್ಥಿಸಿದರು.ಜಾಗತಿಕ ಲಿಂಗಾಯತಜಿಲ್ಲಾ ಪ್ರದಾನಕಾರ್ಯದರ್ಶಿ ಅಶೋಕ ಮಳಗಲಿ ಸ್ವಾಗತಿಸಿದರು . ಜಾಗತಿಕ ಲಿಂಗಾಯತ ಮಹಾಸಭಾ ನಗರಘಟಕಾಧ್ಯಕ್ಷಎಸ್.ಜಿ. ಸಿದ್ನಾಳ ವಂದಿಸಿದರು. ಉಪನ್ಯಾಸಕಡಾ. ಅಡಿವೆಪ್ಪಾಇಟಗಿ ನಿರೂಪಿಸಿದರು.

ನೃತ್ಯ ಸ್ಪರ್ಧೆಯಲ್ಲಿ ವಿಜೇತ ಮೂರು ತಂಡಗಳಿಗೆ ಬಹುಮಾನಗಳನ್ನು ವಿತ–ರಿಸಲಾಯಿತು. ಉಳಿದವರಿಗೆ ಸಮಾಧಾನಕರ ಬಹುಮಾನಗಳನ್ನು ನೀಡಲಾಯಿತು.

# ಬೆಳಗಾವಿ: ರಕ್ತದಾನ ಕ್ಯಾಂಪ್



ಬೆಳಗಾವಿ: ರಾಷ್ಟ್ರೀಯ ಸ್ವಯಂಸೇವಕ ಸಂಘ ಮಹಾಂತೇಶ ನಗರ ಉಪನಗರ ಬೆಳಗಾವಿ ಇವರು ರಾಮತೀರ್ಥ ನಗರದ ಸಮುದಾಯ ಭವನದಲ್ಲಿ ಆರ್‌ಎಸ್‌ಎಸ್ ರಾಮತೀರ್ಥ ನಗರ ಶಾಖೆ ವತಿಯಿಂದ ರಕ್ತದಾನ ಕ್ಯಾಂಪ್ ನಲ್ಲಿ ಸಂಗ್ರಹಿಸಿದ ರಕ್ತವನ್ನು KLE Dr:Prabhakar Kore Hospital &Medical Research Centre ಇವರಿಗೆ ಕೊಡಲಾಯಿತು.

ಈ ಕ್ಯಾಂಪ್ ನಲ್ಲಿ ರಾಮತೀರ್ಥ ನಗರ ಮತ್ತು ಸುತ್ತ ಮುತ್ತಲಿನ ಸುಮಾರು ಜನರು ರಕ್ತದಾನ ಮಾಡಿದರು. ಮತ್ತು ಸುಮಾರು ಜನರು ಬಿಪಿ ಮತ್ತು ಶುಗರ್ ತಪಾಸಣೆ ಮಾಡಿಕೊಂಡರು.

ಈ ರಕ್ತದಾನ ಕಾರ್ಯಕ್ರಮದಲ್ಲಿ ಸ್ವಯಂ ಸೇವಕರಾದ ದಿನೇಶ ಪಾಟೀಲ ಅವರು ಮನುಷ್ಯ ಸಮಾಜಜೀವಿ ತನ್ನಂತಹವರೇ ಆದ ಲಕ್ಷಾಂತರ ಜನಗಳ ಸಮುದಾಯದಲ್ಲಿ ಆತ ಬದುಕುತ್ತಾನೆ. ಈ ಸಮಾಜದಲ್ಲಿ ಎಲ್ಲ ಸುಖ ಭೋಗಗಳನ್ನು ಹೊಂದಿರುವ ಶ್ರೀಮಂತರು ಇರುವಂತೆಯೇ ಯಾವುದೇ ಬಗೆಯ ಉತ್ತಮ ಪರಿಸ್ಥಿತಿ ಇರುದ ದುರದೃಷ್ಟ ವಂತರು ಇದ್ದಾರೆ. ದಾನದ ಮೂಲಕ ಉಳ್ಳವರು ಇಲ್ಲದವರಿಗೆ ನೇರವಾಗುವುದು ಮಾನವೀಯತೆಯ ಲಕ್ಷಣ ಎಲ್ಲಾ ದಾನಗಳಿಗಿಂತ ರಕ್ತದಾನ ಅತ್ಯಂತ ಮಹತ್ವಪೂರ್ಣವಾಗಿದೆ. ಎಂದು ಹೇಳಿದರು.

ರಕ್ತವು ನಮ್ಮ ದೇಹದ ಅತ್ಯಂತ ವಿಶಿಷ್ಟವಾದ ಘಟಕ. ಕ್ಯಾನ್ಸರನಂತಹ ರೋಗ ಇರುವವ–ರಿಗೆ, ಅಪಘಾತದಲ್ಲಿ ನೊಂದಿರುವವ–ರಿಗೆ ಅಥವಾ ಶಸ್ತ್ರಕ್ರಿಯೆಗೆ ಒಳಗದವರಿಗೆ ಹೆಚ್ಚಿನ ಪ್ರಮಾಣದಲ್ಲಿ ರಕ್ತವನ್ನು ದೇಹದ ಹೊರಗಿನಿಂದ ಪೋರೈಸಬೇಕಾಗುವುದು. ಆದ್ದರಿಂದ ನಾವು ಒಂದು ಬಾರಿ ರಕ್ತದಾನ ಮಾಡಿದರೆ ಮೂರು ಬಗೆಯ ರೋಗಿಗಳಿಗೆ ಉಪಕಾರವಾಗುವುದು. ಎಂದು ಶ್ರೀ ಸುರೇಶ ಯಾದವ ಮಾತನಾಡಿದರು. ಈ ರಕ್ತದಾನ ಕಾರ್ಯಕ್ರಮದಲ್ಲಿ ಹನುಮಂತ ಕೊಂಗಲಿ, ಬಾಳಪ್ಪ ಪಾಟೀಲ ಮತ್ತು ರಾಮತೀರ್ಥ ನಗರದ ಸ್ವಯಂ ಸೇವಕರು ಭಾಗವಹಿಸಿದ್ದರು.

# ಅಭಿವೃದ್ಧಿಗಾಗಿ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿ: ಸತೀಶ್ ಜಾರಕಿಹೊಳಿ





ಯಮಕನಮರಡಿ: ರಾಜ್ಯದಲ್ಲಿ ಈ ಬಾರಿ ಕಾಂಗ್ರೆಸ್ ಪಕ್ಷ ಸ್ವಂತ ಬಲದ ಮೇಲೆ ಸರಕಾರ ರಚಿಸಲಿದೆ. ಮತದಾರರು ಅಭಿವೃದ್ಧಿಗಾಗಿ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿ ಬಿಜೆಪಿಯ ಭ್ರಷ್ಟ ಆಡಳಿತಕ್ಕೆ ಜನ ತಕ್ಕ ಪಾಠ ಕಲಿಸಲು ಮುಂದಾಗಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ ಹೇಳಿದರು.

ಯಮಕನಮರಡಿ ವಿಧಾನಸಭಾ ಕ್ಷೇತ್ರದ ಇಸ್ಲಾಂಪುಚರ ಚಿಕ್ಕಲದಿನ್ನಿ, ಹೊಸಗಡ, ಶಹಬಂದರ್, ರಾಜಾಕಟ್ಟಿ, ಯಲ್ಲಾಪುರ ಗ್ರಾಮಸ್ಥರ ಮನೆಗಳಿಗೆ ಭೇಟಿ ನೀಡಿ ಮತಯಾಚಿಸಿ ನಂತರ ಮಾತನಾಡಿದ ಅವರು, ಜನರು ಬೆಲೆ ಏರಿಕೆ, ಭ್ರಷ್ಟಾಚಾರ, ಕೊರೋನಾ, ಪ್ರವಾಹದಿಂದ ರೋಸಿ ಹೋಗಿದ್ದಾರೆ. ಬೆಳಗಾವಿ ಸಂತೋಷ ಪಾಟೀಲ ಎನ್ನುವ ಯುವಕ ಭ್ರಷ್ಟಾಚಾರಕ್ಕ ನಲುಗಿ ಆತ್ಮಹತ್ಯೆ ಮಾಡಿಕೊಂಡಿರುವ ವಿಷಯ ಎಲ್ಲವೂ ಕ್ಷೆ?ತ್ರದ ಜನರಿಗೆ ಗೊತ್ತಿದೆ. ಹಾಗಾಗಿ ಜನರು ಭ್ರಷ್ಟ ಬಿಜೆಪಿ ತಕ್ಕ ಪಾಠ ಕಲಿಸಿ ಕಾಂಗ್ರೆಸ್ ಅಧಿಕಾರಕ್ಕೆ ತರಲು ಕೈ ಪಕ್ಷಕ್ಕೆ ಮತ ನೀಡಬೇಕು ಎಂದು ಮತದಾರರಲ್ಲಿ ಮನವಿ ಮಾಡಿದರು.

ಕಾಂಗ್ರೆಸ್ ಜನರ ಬದುಕು ಕಟ್ಟುವ ಪಕ್ಷ: ಕಾಂಗ್ರೆಸ್ ಪಕ್ಷ ಜನರ ಬದುಕು ಕಟ್ಟುವ ಪಕ್ಷ. ಬಿಜೆಪಿ ಜನರ ಭಾವನೆಯ ಮೇಲೆ ಆಟವಾಡುವ ಪಕ್ಷ. ಎಲ್ಲರೂ ಪಕ್ಷ ಜಾತಿ ಭೇದ ಮರೆತು ಮತ ನೀಡಿ ಕಾಂಗ್ರೆಸ್ ಅನ್ನು ಗೆಲ್ಲಿಸಬೇಕು. ಕಾಂಗ್ರೆಸ್ ಜನರ ಬದುಕಿಗೆ ನೀಡಿರುವ ಗ್ಯಾರಂಟಿ ಕಾರ್ಡ್ ಹಿಡಿದುಕೊಂಡು ಮತ ಕೇಳಲು ಹೆಮ್ಮೆ ಎನಿಸುತ್ತದೆ ಎಂದ ಅವರು, ಜನರ ಎದುರು ಕಣ್ಣೀರು ಸು–ರಿಸುತ್ತಾ ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ದ್ವೇಷ ರಾಜಕಾರಣದ ಮೂಲಕ ಜನರ ಹಿತಾಸಕ್ತಿಗಳನ್ನು ಬಲಿ ನೀಡುತ್ತಿರುವ ಬಿಜೆಪಿ ಪಕ್ಷವನ್ನು ಈ ಬಾರಿ ಸೋಲಿಸಿ, ಜನಪರ ಆಡಳಿತ ನೀಡುವ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿ ಎಂದು ಮನವಿ ಮಾಡಿದರು.

ಯಮಕನಮರಡಿ ಕ್ಷೇತ್ರದಲ್ಲಿ ಶಿಕ್ಷಣದ ಕ್ರಾಂತಿ: ಯಮಕನಮರಡಿ ಕ್ಷೇತ್ರದಲ್ಲಿ ಬರುವ ವಿವಿಧ ಗ್ರಾಮಗಳಲ್ಲಿ ಶಿಕ್ಷಣ ಬಗ್ಗೆ ಸಾಕಷ್ಟು ಬದಲಾವಣೆ ಮಾಡಲಾಗಿದ್ದು, ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ಕೊಡಿಸುವ ಉದ್ದೇಶದಿಂದ ಶಾಲಾ–ಕಾಲೇಜುಗಳನ್ನು ಸುಧಾರಣೆ ಮಾಡಲಾಗಿದೆ.

ಜನಸಂಖ್ಯೆಗೆ ಅನುಗುಣವಾಗಿ ಕ್ಷೇತ್ರದ ಪ್ರತಿ ಗ್ರಾಮಕ್ಕೂ 2 ಕೋಟಿಯಿಂದ 5 ಕೋಟಿ ರೂ. ವರೆಗೆ ಅನುದಾನ ನೀಡಲಾಗಿದೆ. ಶೋಷಿತ, ಆರ್ಥಿಕವಾಗಿ ತೀರಾ ಹಿಂದುಳಿದ ವರ್ಗಗಳಿಗೆ ಶಕ್ತಿ ತುಂಬುವ ಕೆಲಸ ಮಾಡಿದ್ದೇವೆ. ಬಡ ಜನರಿಗೆ ವಸತಿ ಯೋಜನೆಯಡಿ ದಾಖಲೆಯ ಮನೆಗಳನ್ನು ನಿರ್ಮಾಣ ಮಾಡಿದ್ದೇವೆ. ಹಿಂದಿನ ಸಿದ್ದರಾಮಯ್ಯನವರ ಅಧಿಕಾರದ ಅವಧಿಯಲ್ಲಿ ಎಸ್ಸಿ–ಎಸ್ಟಿ ಸಮುದಾಯಕ್ಕೆ ಸಾಕಷ್ಟು ಅನುದಾನ ನೀಡಿ, ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇವೆ. ಆದ್ದರಿಂದ ಕ್ಷೇತ್ರಕ್ಕೆ ಇನ್ನಷ್ಟು ಅಭಿವೃದ್ಧಿ ಮಾಡಲು ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಗ್ರಾಮಕ್ಕೆ ಆಗಮಿಸಿದ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಅವರನ್ನು ಗ್ರಾಮಸ್ಥರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಯಮಕನಮರಡಿ ವಿಧಾನಸಭಾ ಕ್ಷೇತ್ರದ ಇಸ್ಲಾಂಪುರ, ಚಿಕ್ಕಲದಿನ್ನಿ, ಹೊಸಗಾಡ, ಶಹಾಬಂದರ, ರಾಜಾಕಟ್ಟಿ, ಯಲ್ಲಾಪುರ ಗ್ರಾಮಸ್ಥರು ಇದ್ದರು.

# ಬಿಜೆಪಿ ನಾಯಕರಿಗೆ ಅಹಂ ಹೆಚ್ಚಿದೆ: ಶೆಟ್ಟರ



ಹುಬ್ಬಳ್ಳಿ: ಜನರ ಸಹಕಾರ ಇದ್ದರೆ ಅಭಿವೃದ್ಧಿ, ಸಾಧನೆ ಮಾಡಲು ಸಾಧ್ಯ. ನಾನು–ನನ್ನಿಂದಲೇ ಎಲ್ಲ ಎಂಬ ಅಹಂಭಾವದಿಂದ ಯಾವ ಘನ ಕಾರ್ಯ ಸಾಧಿಸಲು ಸಾಧ್ಯವಿಲ್ಲ. ಆದರೆ, ಇತ್ತೀಚೆಗೆ ಬಿಜೆಪಿ ಕೆಲ ನಾಯಕರಲ್ಲಿ ಅಹಂಭಾವ ಮಿತಿ ಮೀರಿದೆ ಎಂದು ಮಾಜಿ ಮುಖ್ಯಮಂತ್ರಿ, ಹು–ಧಾ ಕೇಂದ್ರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಜಗದೀಶ ಶೆಟ್ಟರ ಹೇಳಿದರು.

ತೋಳನಕೆರೆಯಲ್ಲಿ ರವಿವಾರ ವಾಯುವಿಹಾರಿಗಳನ್ನು ಭೇಟಿ ಮಾಡಿ ಮತಯಾಚನೆ ಮಾಡಿ ಮಾತನಾಡಿದ ಅವರು, ಹಾಳು ಬಿದ್ದಿದ್ದ ತೋಳನಕೆರೆಯನ್ನು ಸುಂದರ ವಿಹಾರಧಾಮ ಮಾಡಲು ನಿಮ್ಮೆಲ್ಲರ ಸಹಕಾರದಿಂದ ಸಾಧ್ಯವಾಯಿತು. ಅದನ್ನು ನಾನೆಂದು ಮರೆಯುವುದಿಲ್ಲ. ಯಾವುದೇ ಅಭಿವೃದ್ಧಿ ಕಾರ್ಯಗಳಿರಲಿ, ಸಾಧನೆಯೇ ಇರಲಿ ಜನರ ಸಹಕಾರ ಇಲ್ಲವಾದರೆ ಏನನ್ನು ಮಾಡಲು ಸಾಧ್ಯವಿಲ್ಲ. ಆದರೆ, ಬಿಜೆಪಿಯ ಕೆಲ ನಾಯಕರಿಗೆ ಎಲ್ಲವೂ ನನ್ನಿಂದಲೇ ಎಂಬ ಭಾವ ಮೂಡಿಬಿಟ್ಟಿದೆ. ಜನರನ್ನು ಬಿಟ್ಟರೆ ತಾವೇನು ಎಂಬುದನ್ನು ಅವರೊಮ್ಮೆ ಯೋಚಿಸಿಬೇಕಿದೆ ಎಂದರು.

# ಕಾರ್ಮಿಕರು ಶ್ರಮಜೀವಿಗಳು: ಪ್ರದೀಪ್ ಎಂ. ಜೆ



ಬೆಳಗಾವಿ: ಇಲ್ಲಿನ ಕಾಂಗ್ರೆಸ್ ಕಚೇರಿಯಲ್ಲಿ ಬೆಳಗಾವಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ವಿಶ್ವ ಕಾರ್ಮಿಕರ ದಿನಾಚರಣೆ ಆಚ–ರಿಸಲಾಯಿತು. ಕಾರ್ಮಿಕರ ದಿನಾಚರಣೆ ನಿಮಿತ್ತ ಇಬ್ಬರು ಕಾರ್ಮಿಕ–ರಿಗೆ ಸನ್ಮಾನಿಸಿ, ಗೌರವಿಸಲಾಯಿತು.

ಈ ವೇಳೆ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರದೀಪ್ ಎಂ. ಜೆ ಮಾತನಾಡಿ, ಕಾರ್ಮಿಕರು ಹಗಲಿರುಳು ಶ್ರಮಿಸಿ 'ನಾಡಿಗೆ ಬೆಳಕು ಕೊಟ್ಟುವರು. ಕಾರ್ಮಿಕರ ಬೆವರಿನ ಹನಿಗಳ ಮಹತ್ವವನ್ನು ಪ್ರತಿಯೊಬ್ಬರು ತಿಳಿದುಕೊಂಡು ಅವರಿಗೆ ಗೌರವಿಸುವ ಕಾರ್ಯವಾಗಬೇಕು ಎಂದರು.

ಜಾಗತೀಕರಣದ ಬಿರುಗಾಳಿಯಲ್ಲಿ ಕಂಗೆಟ್ಟು ಹೋಗಿರುವ ಅನೇಕ ಕಾರ್ಮಿಕ ಹೋರಾಟಗಳು ಹೊಸ ಹುಡುಕಾಟದಲ್ಲಿ ಇರುವಾಗಲೇ ಸಂಘಟಿತರು, ಅಸಂಘಟಿತರು ಒಂದಾಗಬೇಕು ಎಂಬ ಉದ್ಘೋಷದೊಂದಿಗೆ ಆಚರಿಸುವ ವಿಶ್ವ ಕಾರ್ಮಿಕ ದಿನಾಚರಣೆಗೆ ಈ ಸ್ಮಾರಕ ಸ್ಫೂರ್ತಿಯ ಚಿಲುಮೆಯಾಗಿ ನಿಂತಿದೆ.

ಪ್ರತಿ ವರ್ಷ ಮೇ 1 ರಂದು ಕಾರ್ಮಿಕ ದಿನಾಚರಣೆ ನಡೆಯುವುದು. ಈ ನಾಡನ್ನು ಶ್ರೀಮಂತಗೊಳಿಸಿದವರು ಕಾರ್ಮಿಕರು, ಇಂತಹ ಶ್ರಮಜೀವಿಗಳನ್ನು ನಿತ್ಯವೂ ನಾವೆಲ್ಲರೂ ಗೌರವಿಸೋಣ ಎಂದು ಹೇಳಿದರು.

ಬಸವರಾಜ ಶಿಗ್ಗಾಂವಿ, ರಾಜಾ ಸಲೀಂ, ಇಮ್ರಾನ್ ತಪ್ಪಕೀರ್ ಶಖೀಲ್ ಮುಲ್ಲಾ , ಡಾ. ದಿನೇಶ ನಾಸಿಪುಡಿ, ಹಾಗೂ ಇತರರು ಇದ್ದರು.

# ಸಾಂಬ್ರಾ, ಹಿಂಡಲಗಾ ಭಾಗದಲ್ಲಿ ಲಕ್ಷ್ಮೀ ಹೆಬ್ಬಾಳಕರ್ ಗೆ ಭಾರಿ ಜನ ಬೆಂಬಲ





ಬೆಳಗಾವಿ: ಬೆಳಗಾವಿ ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಶಾಸಕಿ ಲಕ್ಷ್ಮೀ ಹೆಬ್ಬಾಳಕರ್ ಅವರು ಕ್ಷೇತ್ರದ ವಿವಿಧೆಡೆ ಪ್ರಚಾರ ಕಾರ್ಯವನ್ನು ಮುಂದುವ–ರಿಸಿದ್ದಾರೆ. ಎಲ್ಲೆಡೆ ನಿರೀಕ್ಷೆಗೂ ಮೀರಿ ಜನ ಬೆಂಬಲ ವ್ಯಕ್ತವಾಗುತ್ತಿದ್ದು, ಗೆಲುವಿನ ವಿಶ್ವಾಸವನ್ನು ಹೆಚ್ಚಿಸಿದೆ.

ಭಾನುವಾರ ಸಂಜೆ ಸಾಂಬ್ರಾದಲ್ಲಿ ಲಕ್ಷ್ಮೀ ಹೆಬ್ಬಾಳಕರ್ ರೋಡ್ ಶೋ ನಡೆಸಿದರು. ಸಾವಿರಾರು ಜನರು ಸ್ವಯಂ ಪ್ರೇರಣೆಯಿಂದ ರೋಡ್ ಶೋದಲ್ಲಿ ಭಾಗವಹಿಸಿದ್ದರು. ಅಲ್ಲದೆ ರಸ್ತೆಯ ಇಕ್ಕೆಲಗಳಲ್ಲೂ ಜನರು ನಿಂತು ಹೂವು, ಮಾಲೆಗಳನ್ನು ಹಾಕುವ ಮೂಲಕ ಶುಭ ಕೋರಿದರು.

ಸಾಂಬ್ರಾದ ಗಲ್ಲಿ ಗಲ್ಲಿಗಳಲ್ಲಿ ರೋಡ್ ಶೋ ನಡೆಸಲಾಯಿತು. ಇಡೀ ಗ್ರಾಮದಲ್ಲಿ ಜಾತ್ರೆಯ ಸ್ವರೂಪದಲ್ಲಿ ಜನರು ಸೇರಿ ಲಕ್ಷ್ಮೀ ಹೆಬ್ಬಾಳಕರ್ ಅವರ ಗೆಲುವಿನ ಅಂತರ ಹಿಂದಿನ ಬಾರಿಗಿಂತ ಹೆಚ್ಚಾಗಲಿದೆ ಎನ್ನುವ ವಿಶ್ವಾಸ ಮೂಡಿಸಿದರು. ಹಿರಿಯರು ಕಂಡಲ್ಲೆಲ್ಲ ವಾಹನದಿಂದ ಇಳಿದು ಅವರ ಕಾಲಿಗೆರಗುವ ಮೂಲಕ ಲಕ್ಷ್ಮೀ ಹೆಬ್ಬಾಳಕರ್ ಆಶೀರ್ವಾದ ಪಡೆದರು. ಮಹಿಳೆಯರು ಹತ್ತಿರ ಬಂದು ಅರಿಶಿಣ ಕುಂಕುಮ ನೀಡಿ, ಶುಭ ಕೋರುತ್ತಿದ್ದರು.

ಹಿಂದಿನ ಚುನಾವಣೆ ವೇಳೆ ನೀಡಿದ್ದ ಎಲ್ಲ ಭರವಸೆಗಳನ್ನು ಈಡೇರಿಸಿದ್ದೇನೆ. ಮನೆ ಮಗಳಂತೆ ನಿಮ್ಮ ಕಷ್ಟ, ಸುಖದಲ್ಲಿ ಜೊತೆಯಾಗಿದ್ದೇನೆ. ಮತ್ತೊಮ್ಮೆ ಅವಕಾಶ ಮಾಡಿಕೊಡಿ. ಕ್ಷೇತ್ರವನ್ನು ಇನ್ನಷ್ಟು ಅಭಿವೃದ್ಧಿಪಡಿಸೋಣ. ಶಿಕ್ಷಣ, ಉದ್ಯೋಗ, ಆರೋಗ್ಯ ಸೇವೆಗೆ ಮುಂದಿನ ದಿನಗಳಲ್ಲಿ ಹೆಚ್ಚಿನ ಆದ್ಯತೆ ನೀಡಿ ಕೆಲಸ ಮಾಡುತ್ತೇನೆ. ಮೇ 10ರಂದು ನಡೆಯಲಿರುವ ವಿಧಾನ ಸಭೆ ಚುನಾವಣೆಯಲ್ಲಿ ತಪ್ಪದೆ ಮತ ಚಲಾಯಿಸಿ. ಬ್ಯಾಲೆಟ್ ಯುನಿಟ್ ನಲ್ಲಿ 4ನೇ ನಂಬರ್ ನಲ್ಲಿರುವ ನನ್ನ ಹೆಸರಿನ ಮುಂದಿನ ಬಟನ್ ಒತ್ತುವ ಮೂಲಕ ಆಶೀರ್ವಾದ ಮಾಡಿ ಎಂದು ಲಕ್ಷ್ಮೀ ಹೆಬ್ಬಾಳಕರ್ ಅಲ್ಲರಲ್ಲೂ ಕೈ ಮುಗಿದು ವಿನಂತಿಸುತ್ತಿದ್ದರು.

ಮಧ್ಯೆ ಮಧ್ಯೆ ಕಾಲ್ನಡಿಗೆಯಲ್ಲೇ ಸಾಗುತ್ತಿದ್ದ ಲಕ್ಷ್ಮೀ ಹೆಬ್ಬಾಳಕರ್ ಅವ–ರಿಗೆ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಮತ್ತು ಸ್ಥಳೀಯ ಹಲವಾರು ಮುಖಂಡರು ಸಾಥ್ ನೀಡಿದರು. ಯುವಕರು ಜಯಘೋಷಗಳನ್ನು ಮೊಳಗಿಸುತ್ತಿದ್ದರು. ಲಕ್ಷ್ಮೀ ಅಕ್ಕ ಗೆಲ್ಲೋದು ಪಕ್ಕಾ ಎಂದು ಘೋಷಣೆ ಕೂಗುತ್ತಿದ್ದರು. ಅನೇಕ ಮನೆಗಳ ಮುಂದೆ ರಂಗವಲ್ಲಿಗಳನ್ನು ಹಾಕಿ ಸ್ವಾಗತ ಕೋರುತ್ತಿದ್ದರು. ಯುವತಿಯರು, ಮಹಿಳೆಯರು ಕೈಕುಲುಕಿ ಶುಭಾಷಯ ಹೇಳುತ್ತಿದ್ದರು. ನಿಮ್ಮ ಜೊತೆಗೆ ನಾವಿದ್ದೇವೆ, ಮುಂದೆ ಹೋಗಿ ಎಂದು ಹುರುದುಂಬಿಸಿ ವಿಶ್ವಾಸ ಮೂಡಿಸುತ್ತಿದ್ದರು.

ಹಿಂಡಲಗಾದಲ್ಲಿ ಬೈಕ್ ರ್ಯಾಲಿ

ಹಿಂಡಲಗಾದಲ್ಲಿ ಸೋಮವಾರ ಬೆಳಗ್ಗೆ ಬೃಹತ್ ಬೈಕ್ ರ್ಯಾಲಿ ನಡೆಯಿತು. ನೂರಾರು ಜನರು ರ್ಯಾಲಿಯಲ್ಲಿ ಭಾಗವಹಿಸಿ ಮತ ಯಾಚನೆ ಮಾಡಿದರು. ಶಿವಂ ನಗರದಿಂದ ಆರಂಭವಾದ ಬೈಕ್ ರ್ಯಾಲಿ ವಿಜಯನಗರದವರೆಗೂ ನಡೆಯಿತು.

ಕಳೆದ ಅವಧಿಯಲ್ಲಿ ನೀಡಿದ್ದ ಆಶ್ವಾಸನೆಯಂತೆ ಕ್ಷೇತ್ರದಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿದ್ದೇನೆ. ಜನರ ಆಶೋತ್ತರಗಳನ್ನು ಈಡೇರಿಸಿದ್ದೇನೆ. ಮುಂದಿನ ದಿನಗಳಲ್ಲಿ ಇನ್ನಷ್ಟು ದೊಡ್ಡ ಯೋಜನೆಗಳನ್ನು ತರುವ ಮೂಲಕ ಕ್ಷೇತ್ರದ ಸಮಗ್ರ ಅಭಿವೃದ್ಧಿಯ ಜೊತೆಗೆ ಯುವಕರ ಕೈಗೆ ಉದ್ಯೋಗ ಕೊಡುವ ಕೆಲಸ ಮಾಡುತ್ತೇನೆ ಎಂದು ಲಕ್ಷ್ಮೀ ಹೆಬ್ಬಾಳಕರ್ ಈ ಸಂದರ್ಭದಲ್ಲಿ ಭರವಸೆ ನೀಡಿದರು.

ರ್ಯಾಲಿಯಲ್ಲಿ ನೂರಾರು ಜನರು ಪಾಲ್ಗೊಂಡಿದ್ದಲ್ಲದೆ. ರಸ್ತೆಯ ಇಕ್ಕೆಲಗಳನ್ನೂ ನಿಂತ ಜನ ಜೈ ಜೈ ಕಾರ ಘೋಷಣೆಗಳನ್ನು ಕೂಗುತ್ತಿದ್ದರು. ವಿರೋಧಿಗಳೇ ಇಲ್ಲವೇನೋ ಎನ್ನುವ ರೀತಿಯಲ್ಲಿ ಜನರ ಸೇರಿ ಲಕ್ಷ್ಮೀ ಹೆಬ್ಬಾಳಕರ್ ಅವರಿಗೆ ಶುಭ ಕೋರಿದರು.

# ಧಾರಾಕಾರ ಮಳೆಗೆ ಒಂದೇ ಕುಟುಂಬದ 3 ಜನ ನೀರುಪಾಲು



ಎಬೀದರ್: ಧಾರಾಕಾರವಾಗಿ ಸು–ರಿದ ಮಳೆಗೆ ಒಂದೇ ಕುಟುಂಬದ ಮೂವರು ನೀರುಪಾಲಾದ ಘಟನೆ ಗಡಿಜಿಲ್ಲೆ ಬೀದರ್‌ನಲ್ಲಿ ನಡೆದಿದೆ.

ಇಲ್ಲಿನ ಔರಾದ್ ತಾಲೂಕಿನ ಹೆಡಗಾಪೂರ್ ಗ್ರಾಮದಲ್ಲಿ ದಂಪತಿ ಹಾಗೂ ಮಕ್ಕಳು ಸೇರಿ ನಾಲ್ವರು ಜಮೀನಿನ ಕೆಲಸ ಮುಗಿಸಿಕೊಂಡು ಮನೆಗೆ ವಾಪಸಾಗುವಾಗ ಈ ದುರ್ಘಟನೆ ನಡೆದಿದೆ.

ಹಳ್ಳ ದಾಟುವಾಗ ನೀರು ರಭಸವಾಗಿ ಬಂದ ಪರಿಣಾಮ ಇಡೀ ಮೂವರು ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ. ಪತಿ ಮಾತ್ರ ಈಜಿ–ಕೊಂಡು ದಡ ಸೇರದ್ದಾನೆ. ವಿಷಯ ತಿಳಿದು ಸ್ಥಳಕ್ಕೆ ಅಗ್ನಿ ಶಾಮಕ ದಳದ ಸಿಬ್ಬಂದಿ ಆಗಮಿಸಿದ್ದು, ಮೂವರಿಗಾಗಿ ಶೋಧ ಕಾರ್ಯ ನಡೆಸುತ್ತಿದ್ದಾರೆ.

# ದೇಶದ ಅಭಿವೃದ್ಧಿಯಲ್ಲಿ ಕಾರ್ಮಿಕರದ್ದು ಪ್ರಮುಖ ಪಾತ್ರ



ಖಾನಾಪುರ: ಖಾನಾಪುರ ತಾಲೂಕಿನ ದೇಸೂರ ಗ್ರಾಮದ ಗುಡ್ಸ್ ರೈಲ್ವೆ ಕಾರ್ಮಿಕರೊಂದಿಗೆ ಯುವ ನಾಯಕ ರಾಹುಲ್ ಜಾರಕಿಹೊಳಿ ಅವರು ಕಾರ್ಮಿಕರ ದಿನಾಚರಣೆಯನ್ನು ಆಚರಿಸಿದರು.

ಈ ವೇಳೆ ಯುವ ನಾಯಕ ರಾಹುಲ್ ಜಾರಕಿಹೊಳಿ ಅವರು, ದೇಶ ಅದ್ಭುತವಾಗಿ ಬೆಳೆಯಲು ಕಾರ್ಮಿಕರ ಬಹುಪಾಲು ಇದೆ. ನಿಷ್ಠೆಯಿಂದ ಹಗಲಿರುಳು ಶ್ರಮಿಸುವ ಕಾಯಕ ಜೀವಿಗಳು. ಪ್ರತಿಹಂತದಲ್ಲಿ ಅವರನ್ನು ಸ್ಮ–ರಿಸುವ ಕಾರ್ಯವಾಗಬೇಕಿದೆ. ನಾವೆಲ್ಲರೂ ಸೂರಿನಲ್ಲಿ ಜೀವನ ಸಾಗಿಸಲು ಕಾರ್ಮಿಕರ ಶ್ರಮ ಕಾರಣ, ಅವರನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಮೇ 1 ರಂದು ಪ್ರತಿವರ್ಷ 'ಅಂತಾರಾಷ್ಟ್ರೀಯ ಕಾರ್ಮಿಕರ ದಿನ'ವನ್ನು ಆಚರಿಸಲಾಗುತ್ತದೆ. ಇಂತಹ ಶ್ರಮಜೀವಿಗಳ ಪ್ರಯತ್ನ, ದೇಶದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುವ ಕಾರ್ಮಿಕರ ಶ್ರಮ ಮತ್ತು ಸೇವೆಯನ್ನು ಸ್ಮರಿಸೋಣ ಎಂದು ಹೇಳಿದರು.

# ಅಪರಿಚಿತ ಮಹಿಳೆಯಿಂದ ಯುವಕನ ಕೊಲೆ



ಬೆಳಗಾವಿ: ಬೆಳಗಾವಿ ನಗರದಲ್ಲಿ ತಡರಾತ್ರಿ 2 ಗಂಟೆಯ ಸುಮಾರಿಗೆ ಕ್ಷುಲಕ್ ಕಾರಣಕ್ಕೆ ಅಪರಿಚಿತ ಮಹಿಳೆಯೊಬ್ಬಳು ಯುವಕನನ್ನು ಚಾಕುವಿನಿಂದ ಇರಿದು ಕೊಲೆ ಮಾಡಿದ ಘಟನೆ ನಡೆದಿದೆ.

ಮೃತ ಯುವಕ ತಾರಿಹಾಳ ಗ್ರಾಮದ ನಾಗರಾಜ ಭೀಮಸಿ ರಾಗಿ ಪಾಟೀಲ(28) ಎಂದು ಗುರುತಿಸಲಾಗಿದೆ. ಈ ದುರ್ಘಟನೆ ನಗರದ ಹಳೆ ಪಿಬಿ ರಸ್ತೆಯ ಕೀರ್ತಿ ಹೊಟೇಲ್ ಪಕ್ಕ ಘಟನೆ ನಡೆದಿದೆ.

ರಾತ್ರಿ ವೇಳೆ ರಸ್ತೆಯಲ್ಲಿ ಕುಡಿದ ನಶೆಯಲ್ಲಿ ಹೋಲಾಡುತ್ತ, ಕೈಯಲ್ಲಿ ಚಾಕು ಹಿಡಿದು ಹೊರಟಿದ್ದ ಅಪರಿಚಿತ ಮಹಿಳೆಯನ್ನು ಬೈಕ್ ಸವಾರನಾದ ಯುವಕ ಪ್ರಶ್ನಿಸಿದ್ದಾನೆ.

ಈ ವೇಳೆ ಮಾತಿಗೆ ಮಾತು ಬೆಳೆದು ಮಹಿಳೆ ಚಾಕುವಿನಿಂದ ಚುಚ್ಚಿದ್ದಾಳೆ.

ಘಟನೆ ಸಂಭವಿಸುತ್ತಲೇ ಜಿಲ್ಲಾಸ್ಪತ್ರೆಗೆ ಸಾಗಿಸಿದರೂ ಚಿಕಿತ್ಸೆ ಫಲಕಾರಿಯಾಗದೇ ಯುವಕ ಸಾವಿಗಿಡಾಗಿದ್ದಾನೆ.

ಇನ್ನು ಆರೋಪಿತಳು ಎನ್ನಲಾದ ಮಹಿಳೆ ಕಂಗ್ರಾಳಿ ಕೆ.ಎಚ್ ಗ್ರಾಮದವಳೆನ್ನಲಾದ ಜಯಶ್ರೀ ಪವನ ಪವಾರ ಎಂಬಾಕೆಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

# ಅಂತರಾಷ್ಟ್ರೀಯ ಕಾರ್ಮಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮತದಾನ ಜಾಗೃತಿ



ಬೆಳಗಾವಿ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿ ಸ್ಥಳದಲ್ಲಿ ಸೋಮವಾರ ಮೇ.1 ರಂದು ಕೂಲಿ ಕಾರ್ಮಿಕರೊಂದಿಗೆ ಅಂತರಾಷ್ಟ್ರೀಯ ಕಾರ್ಮಿಕರ ದಿನಾಚರಣೆ ಆಚರಣೆ ಮಾಡಲಾಯಿತು.

ತಾಲೂಕಾ ಪಂಚಾಯತ ಕಾರ್ಯನಿರ್ವಹಕ ಅಧಿಕಾರಿಗಳಾದ ವಿಲಾಸರಾಜ ಅವರು ಎಲ್ಲ ಕಾರ್ಮಿಕರಿಗೆ ಸಿಹಿ ಹಂಚುವ ಮೂಲಕ ಕಾರ್ಮಿಕ ದಿನಾಚರಣೆಯ ಶುಭಾಶಯಗಳನ್ನು ತಿಳಿಸಿದರು. ನಂತರ ತಾಲೂಕಾ ಸ್ವೀಪ್ ಸಮಿತಿವತಿಯಿಂದ ಮತದಾನ ಜಾಗೃತಿ ಹಮ್ಮಿಕೊಳ್ಳಲಾಯಿತು.

ಕಾರ್ಮಿಕರೊಂದಿಗೆ ಮಾತನಾಡಿ, ಪ್ರಜಾಪ್ರಭುತ್ವ ಉಳಿಯಬೇಕಾದರೆ ಎಲ್ಲರೂ ಕಡ್ಡಾಯ ಮತದಾನ ಮಾಡಬೇಕು. ಮತದಾರರು ಯಾವುದೇ ಆಮಿಷಕ್ಕೆ ಒಳಗಾಗದೇ ನಿಮ್ಮ ಮತವನ್ನು ಚಲಾಯಿಸಬೇಕು. ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಿ, ಮತ ಚಲಾಯಿಸುವ ಮೂಲಕ ನಿಮ್ಮ ಹಕ್ಕನ್ನು ಚಲಾಯಿಸಿ. ನಿಮಗೆ ಬೇಕಾದ ನಾಯಕರನ್ನು ನೀವೇ ಆಯ್ಕೆ ಮಾಡಿಕೊಳ್ಳಬಹುದು ಎಂದು ತಿಳಿಸಿದರು. ಮೇ.10 ರಂದು ಎಲ್ಲರೂ ಮತ ಕೇಂದ್ರಗಳಿಗೆ ತೆರಳಿ ಮತದಾನ ಮಾಡಲು ಕರೆ ಕೊಟ್ಟರು.

ತಾಲೂಕಾ ಐಇಸಿ ಸಂಯೋಜಕರಾದ ಮಹಾಂತೇಶ ಬಾದವನಮಠ, ಬಿ. ಎಫ್.ಟಿ, ಸಂಜು ಕಾಡಗಿ, ಗ್ರಾಮ ಪಂಚಾಯತಿ ಗಣ–ಕಯತ್ರ ನಿರ್ವಾಹಕ ಬರಮಪ್ಪಾ ಕೆಂಚಗಾರಟ್ಟಿ ಹಾಜರಿದ್ದರು.

## 6ನೇ ಕ್ಲಾಸ್ ವಿದ್ಯಾರ್ಥಿನಿಯರಿಗೆ ಅಶ್ಲೀಲ ವಿಡಿಯೋ: ಕಾಮುಕ ಶಿಕ್ಷಕನ ಬಂಧನ

ಪಂಜಾಬ್: ಶಿಕ್ಷಕನೋರ್ವನ ನಾಚಿಕೆಗೇಡಿನ ಕೃತ್ಯ ಪಂಜಾಬ್‌ನ ಫಗ್ವಾರಾದಲ್ಲಿ ಬೆಳಕಿಗೆ ಬಂದಿದೆ.

6ನೇ ತರಗತಿ ವಿದ್ಯಾರ್ಥಿನಿಯರಿಗೆ ಅಶ್ಲೀಲ ವಿಡಿಯೋ ತೋ–ರಿಸಿದ ಕಾಮುಕ ಶಿಕ್ಷಕನನ್ನು ಪೊಲೀಸರು ಬಂಧಿಸಿದ್ದಾರೆ ಎಂದು ವರದಿಯಾಗಿದೆ.

ಶಾಲಾ ಬಾಲಕಿಯ ತಂದೆ ನೀಡಿದ ದೂರಿನ ಮೇರೆಗೆ ರಾಜೀವ್ ಶರ್ಮಾ ಎಂಬ ಶಿಕ್ಷಕನನ್ನು ಬಂಧಿಸಲಾಗಿದೆ ಎಂದು ಸತ್ನಾಂಪುರ ಎಸ್‌ಎಚ್‌ಒ ಗುರಿಂದರ್ಜಿತ್ ಸಿಂಗ್ ತಿಳಿಸಿದ್ದಾರೆ. ಆರೋಪಿಯು ಗೋಬಿಂದಪುರ ಮೊಹಲ್ಲಾದ ಸರ್ಕಾರಿ ಮಾಧ್ಯಮಿಕ ಸ್ಮಾರ್ಟ್ ಸ್ಕೂಲ್‌ನಲ್ಲಿ ಶಿಕ್ಷಕನಾಗಿದ್ದಾನೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

6ನೇ ತರಗತಿ ವಿದ್ಯಾರ್ಥಿನಿಯರಿಗೆ ಅಶ್ಲೀಲ ವಿಡಿಯೋ ತೋರಿಸಿದ ಶಿಕ್ಷಕನನ್ನು ಪೊಲೀಸರು ಬಂಧಿಸಿದ್ದಾರೆ. ಈ ಶಿಕ್ಷಕನು ತರಗತಿಯ ಎಲ್‌ಸಿಡಿ ಪರದೆಯಲ್ಲಿ ವಿದ್ಯಾರ್ಥಿನಿಯರಿಗೆ ಅಶ್ಲೀಲ ವಿಡಿಯೋಗಳನ್ನು ತೋರಿಸುತ್ತಿದ್ದನು. ನಂತರ ಅಶ್ಲೀಲ ಕೃತ್ಯಗಳನ್ನು ಮಾಡುತ್ತಿದ್ದನು ಎಂದು ಪೊಲೀಸರು ತಿಳಿಸಿದ್ದಾರೆ.

ಮಕ್ಕಳ ಲೈಂಗಿಕ ಅಪರಾಧಗಳಿಂದ ರಕ್ಷಣೆ (ಪೋಕ್ಸೊ) ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆಯ ಸಂಬಂಧಿತ ಸೆಕ್ಷನ್ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ ಎಂದು ಎಸ್‌ಎಚ್‌ಒ ತಿಳಿಸಿದ್ದಾರೆ.

# ಕಾಂಗ್ರೆಸ್ ಅಭ್ಯರ್ಥಿಯಾದ ಪ್ರಭಾವತಿ ಮಾಸ್ತ ಮರಡಿಗೆ ಹಲವರಿಂದ ಬೆಂಬಲ



ಬೆಳಗಾವಿ: ಬೆಳಗಾವಿ ದಕ್ಷಿಣ ಮತಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾದ ಪ್ರಭಾವತಿ ಮಾಸ್ತ ಮರಡಿ (ಚಾವಡಿ) ಇವರನ್ನು ಬೆಂಬಲಿಸಿ ಕಚೇರಿಗೆ ಆಗಮಿಸಿ ಸಭೆ ನಡೆಸುತ್ತಿದ್ದಾರೆ.

ನಮ್ಮ ಮತ ನಿಮಗೆ ಕಾಂಗ್ರೆಸ್ ಪಕ್ಷಕ್ಕೆ ಅದಕ್ಕಾಗಿ ಖುದ್ದಾಗಿ ತಮ್ಮ ಚುನಾವಣಾ ಕಚೇರಿಗೆ ನಾವು ಸೋಮವಾರ ಆಗಮಿಸಿದ್ದೇವೆ ಎಂದು ಅಭ್ಯರ್ಥಿ ಪ್ರಭಾವತಿ ಮುಂದೆ ಹೇಳುತ್ತಿದ್ದರು.

ಅಭ್ಯರ್ಥಿ ಪ್ರಭಾವತಿ ಚಾವಡಿ ಮೊದಲನೇ ಬಾರಿ ದಕ್ಷಿಣ ಮತಕ್ಷೇತ್ರಕ್ಕೆ. ಸ್ಪರ್ಧಿಸುತ್ತಿದ್ದರು ಕೂಡ ಮತಕ್ಷೇತ್ರದಲ್ಲಿ ಮತದಾರರ ಬೆಂಬಲ ಎದ್ದು ಕಾಣಿಸುತ್ತಿದೆ.

ಆದರೆ ಇತ್ತ ಎರಡನೇ ಬಾರಿ ಚುನಾವಣೆಗೆ ಸ್ಪರ್ಧಿಸುತ್ತಿರುವ ಬಿಜೆಪಿ ಅಭ್ಯರ್ಥಿ ಅಭಯ ಪಾಟೀಲ್ ಇನ್ನೂ ದಕ್ಷಿಣ ಮತಕ್ಷೇತ್ರದಲ್ಲಿ ಎಂಇ–ಎಸ್ ಅಭ್ಯರ್ಥಿ ಆದ ರಮಕಾಂತ್ ಕೊಂಡಸ್ಕರ್ ಆದರೆ ಈ ಕ್ಷೇತ್ರದಲ್ಲಿ ದಿನಾಂಕ 10 ರಂದು ನಡೆಯಲಿರುವ 2023ರ ಚುನಾವಣೆಯಲ್ಲಿ ಗೆಲುವಿನ ಹಾರ ಯಾರಿಗೆ ಎಂದು ಕಾದು ನೋಡಬೇಕಾಗಿದೆ.

# ಜಿತೋ ಸಂಸ್ಥೆಯ ವತಿಯಿಂದ ಮತದಾನ ಜಾಗೃತಿ ಅಭಿಯಾನ



ಬೆಳಗಾವಿ: ಜೈನ ಇಂಟರ್‌ನ್ಯಾಷನಲ್ ಟ್ರೇಡ್ ಆರ್ಗನೈಝೇಶನ ಜಿತೋ ಬೆಳಗಾವಿ ವಿಭಾಗದ ವತಿಯಿಂದ ಬೆಳಗಾವಿ ಉತ್ತರ ಮತ್ತು ದಕ್ಷಿಣ ಮತಕ್ಷೇತ್ರದಲ್ಲಿ ಶೇ. 100 ರಷ್ಟು ಮತದಾನ ಮಾಡುವ ಕು–ರಿತು ಜಾಗೃತಿ ಅಭಿಯಾನವನ್ನು ನಡೆಸಲಾಯಿತು.

ಬೆಳಗಾವಿ ಮಹಾನಗರದ ವ್ಯಾಪ್ತಿಯಲ್ಲಿ ಕಳೆದ ವಿಧಾನ ಸಭೆ ಚುನಾವಣೆ ತದನಂತರ ನಡೆದ ಲೋಕಸಭಾ ಉಪ ಚುನಾವಣೆಯಲ್ಲಿ ಶೇ. 60 ರಷ್ಟು ಮತದಾನವಾಗಿದೆ.

ನಗರ ಪ್ರದೇಶದಲ್ಲಿ ಸುಶಿಕ್ಷಿತರು ಹಾಗೂ ಹೆಚ್ಚಿನ ವಿದ್ಯಾವಂತರಿದ್ದರೂ ಸಹ ಮತದಾನ ಕಡೆಮೆಯಾಗುತ್ತಿದೆ.

ಹಾಗಾಗಿ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಶೇ. 100 ರಷ್ಟು ಮತದಾನ ಮಾಡುವ ಮೂಲಕ ಮತದಾರರು ತಮ್ಮ ಕರ್ತವ್ಯ ನಿಭಾಯಿಸ ಬೇಕೆಂದು ಈ ಜಾಗೃತಿ ಆಭಿಯಾನದಲ್ಲಿ ಮನವರಿಕೆ ಮಾಡಿ ಕೊಡಲಾಯಿತು.

ಕರಪತ್ರಕಗಳನ್ನು ಹಂಚುವ ಮೂಲಕ, ಮನೆ ಮನೆಗೆ ತೆರಳಿ, ಉದ್ಯಾನವನದಲ್ಲಿ ಸೇರಿದಂತೆ ಇನ್ನುಳಿದ ಭಾಗಗಗಳಲ್ಲಿ ಮತದಾನದ ಮಹತ್ವ ಮತ್ತು ಕರ್ತವ್ಯದ ಬಗ್ಗೆ ತಿಳುವಳಿಕೆ ನೀಡಲಾಯಿತು.

ಕಳೆದ 10 ದಿನಗಳಿಂದ ಬೆಳಗಾವಿ ದಕ್ಷಿಣ ಮತಕ್ಷೇತ್ರದಲ್ಲಿ ಭಾಗ್ಯನಗರ, ವಿದ್ಯಾನಗರ, ಟಿಳಕವಾಡಿ, ಹಿಂದವಾಡಿ, ಅನಗೋಳ, ರಾಣಿಚೆನ್ನಮ್ಮ ನಗರ, ಗುರುಪ್ರಸಾದ ಕಾಲನಿ, ಸೋಮವಾರ ಪೇಠ, ಮಂಗಳವಾರ ಪೇಠ ಸೇರಿದಂತೆ ಇನ್ನುಳಿದ ಭಾಗಗಳಲ್ಲಿ ಮತದಾನ ಮತ್ತು ಮತಚಲಾವಣೆಯ ಕುರಿತು ಜಾಗೃತಿ ನಡೆಸಲಾಯಿತು.

ಅದರಂತೆ ಬೆಳಗಾವಿ ಉತ್ತರ ಮತಕ್ಷೇತ್ರದಲ್ಲಿ ಹನುಮಾನ ನಗರ, ಸದಾಶಿವ ನಗರ, ವಿಶ್ವೇಶ್ವರ ನಗರ, ಕುವೆಂಪು ನಗರ, ಸೇರಿದಂತೆ ಇನ್ನುಳಿದ ಪ್ರದೇಶಗಳಲ್ಲಿ ಜಾಗೃತಿ ಅಭಿಯಾನ ನಡೆಸಲಾಯಿತು.

BELAGAVI VARADI KANNADA DAILY MORNING : Editor, Printer, Publisher & Owned By : **Satish Basavani Gudagenatti,** Basavani House No.53, Ashray Colony, Sarathi Nagar, Tv Center - 590019, TQ & DIST Belagavi, Karnataka.
Printed At : LAXMI PRINTERS, No.627. Auto Nagar - 590016.TQ & DIST Belagavi, Karnataka Mob : 9900332089